ವಿಜಯಪುರ | ಸಂಪುಟ 04 | ಸಂಚಿಕೆ 071 | ಪುಟ 04 | ₹ 3.00
https://udayarashminews.com
udayarashmi 90088 88340

# ಉದಯ ರಶ್ಮಿ

Udayarashmi Kannada Daily
ಜನಪರ-ಜೀವಪರ
ಕನ್ನಡ ದಿನಪತ್ರಿಕೆ
ಸಂಪಾದಕ : ಇಂದುಶೇಖರ ಮಣೂರ
Editor: Indushekhar Manur
editor.udayarashmi@gmail.com RNI NO: KARKAN/2023/86203 ರವಿವಾರ, ಮೇ, 03, 2026



"ರೈತರಿಗೆ ಗುಣಮಟ್ಟದ ವಿದ್ಯುತ್ ವ್ಯವಸ್ಥೆ ನೀಡುವ ಮಹದಾಸೆಯನ್ನು ಹೊಂದಿದ್ದೇನೆ. 5 ಗ್ಯಾರಂಟಿ ಯೋಜನೆಗಳನ್ನು ದಲ್ಲಾಳಿಗಳು ಇಲ್ಲದೇ ಜನರಿಗೆ ನಮ್ಮ ಸರಕಾರ ತಲುಪಿಸುತ್ತಿದೆ. ಸಾರ್ವಜನಿಕರು ಸಮಸ್ಯೆಗಳ ಮೂಲ ಪರಿಹಾರಕ್ಕೆ ತಾಳ್ಮೆಯಿಂದ ಕಾಯುವುದು ಮುಖ್ಯ."

■ ಅಶೋಕ ಮನಗೂಳಿ
ಶಾಸಕರು, ಸಿಂದಗಿ

## ದೇವರಹಿಪ್ಪರಗಿಯಲ್ಲಿ ಸಮುದಾಯ ಆರೋಗ್ಯ ಕೇಂದ್ರದ ನೂತನ ಕಟ್ಟಡ ಮತ್ತು ಪಟ್ಟಣ ಪಂಚಾಯತಿ ನೂತನ ಕಟ್ಟಡ ಲೋಕಾರ್ಪಣೆ

# ನಮ್ಮ ಸರಕಾರ ಅಭಿವೃದ್ಧಿಗೆ ಬದ್ಧ :ಸಚಿವ ಎಂ.ಬಿ.ಪಾಟೀಲ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕಳೆದ ಮೂರು ವರ್ಷಗಳಲ್ಲಿ ಮುಖ್ಯಮಂತ್ರಿ ಸಿದ್ರಾಮಯ್ಯ ಅವರ ನೇತೃತ್ವದ ನಮ್ಮ ಸರ್ಕಾರ ಎಲ್ಲ ವರ್ಗದ ಜನರ ಉಜ್ವಲ ಭವಿತವ್ಯದ ಆಶಾದೀಪ ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಜನಸಾಮಾನ್ಯರ ಬದುಕಿಗೆ ನೆರವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಣ-ಕಾಸು ತಜ್ಞರಾಗಿದ್ದಾರೆ. ಎಲ್ಲ ವರ್ಗದವರ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಿದೆ. ಆರೋಗ್ಯ, ಶಿಕ್ಷಣ ಸೇರಿದಂತೆ ವಿವಿಧ ಎಲ್ಲ ಆಯಾಮಗಳಲ್ಲೂ ನಮ್ಮ ಸರ್ಕಾರ ಅಭಿವೃದ್ಧಿಗೆ ಬದ್ಧವಾಗಿದೆ ಎಂದು ಬೃಹತ್ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಂ.ಬಿ. ಪಾಟೀಲ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ನಗರಾಭಿವೃದ್ಧಿಕೋಶ, ಇಂಜನೀಯರಿಂಗ್ ಘಟಕ ಬೆಂಗಳೂರು ಹಾಗೂ ಪೌರಾಡಳಿತ ಇಲಾಖೆ ಬೆಂಗಳೂರು ಇವರ ಸಹಯೋಗದಲ್ಲಿ ಶನಿವಾರ ಜಿಲ್ಲೆಯ ದೇವರಹಿಪ್ಪರಗಿ ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೂವತ್ತು ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಿದ ನೂತನ ಕಟ್ಟಡ ಹಾಗೂ ದೇವರಹಿಪ್ಪರಗಿಯ ಪಟ್ಟಣ ಪಂಚಾಯತಿಯ ಕಾರ್ಯಾಲಯದ ನೂತನ ಕಟ್ಟಡದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.



"ವಿಜಯಪುರ ಜಿಲ್ಲೆಯ 178 ಹಳ್ಳ ತುಂಬುವ ಮಹತ್ವಾಕಾಂಕ್ಷಿ ಯೋಜನೆಯನ್ನು ಈಗಾಗಲೇ ಕಾರ್ಯ ಗತ ಗೊಳಿಸಲಾಗಿದೆ. ಕ್ಯಾನಲ್ ಜಾಲ ಮೂಲಕ ಹಳ್ಳತುಂಬಿ ಬಾಂದಾರ ನಿರ್ಮಾಣ ಮಾಡಲಾಗುವುದು. ಇದರಿಂದಾಗಿ ಜಿಲ್ಲೆಯಲ್ಲಿ ಮತ್ತಷ್ಟು ಅಂತರ್ಜಲ ಮಟ್ಟ ಹೆಚ್ಚಾಗಲಿದೆ. ತನ್ಮೂಲಕ ಅಂತರ್ಜಲ ಮಟ್ಟ ಹೆಚ್ಚಳದಲ್ಲಿ ದೇಶದಲ್ಲಿಯೇ ವಿಜಯಪುರ ಜಿಲ್ಲೆ ಮಾದರಿಯಾಗಲಿದೆ."

■ ಎಂ.ಬಿ.ಪಾಟೀಲ
ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರು

ಜಿಲ್ಲೆಯಲ್ಲಿ ಈ ಹಿಂದೆ ಬೇಸಿಗೆ ಸಂದರ್ಭದಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇತ್ತು. ಆದರೆ ನಾವು ಕೈಗೊಂಡ ನೀರಾವರಿ ಯೋಜನೆಗಳಿಂದಾಗಿ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ಹೆಚ್ಚಾಗಿದೆ. ಇದರಿಂದಾಗಿ ಬಿಸಿಲಿನ ಬೇಗೆ ನೀಗಿದೆ. ಜೊತೆಗೆ ಕೋಟಿ ವೃಕ್ಷ ಅಭಿಯಾನದ ಫಲವಾಗಿ ಹಸಿರು ನಳನಳಿಸುವಂತಾಗಿದ್ದನ್ನು ಕಾಣಬಹುದಾಗಿದೆ ಎಂದರು. ಈ ಬಾರಿ ಬೇಸಿಗೆ ಸಂದರ್ಭದಲ್ಲಿ ಜನ-ಜಾನುವಾರುಗಳಿಗೆ



ಕುಡಿಯುವ ನೀರಿಗಾಗಿ ಯಾವುದೇ ಸಮಸ್ಯೆಯಾಗಬಾರದೆಂಬ ದೂರದೃಷ್ಟಿಹೊಂದಿ, ಜಲಾಶಯಗಳಲ್ಲಿ ನೀರು ಕಾಯ್ದಿಟ್ಟುಕೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಈ ಬಾರಿ ಆಗಸ್ಟ್ 1 ರವರೆಗೂ ಕಿಡಿಯು ನೀರಿಗಾಗಿ ನೀರು ಕಾಯ್ದಿಡಲು ಸೂಚಿಸಲಾಗಿದೆ ಎಂದರು. ದೇವರಹಿಪ್ಪರಗಿ ಆಸ್ಪತ್ರೆಯನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇ-ರಿಸಿದ್ದರಿಂದ ಈ ಭಾಗದ ಜನತೆಗೆ ಬಹಳಷ್ಟು ಅನುಕೂಲವಾಗಲಿದೆ ಎಂದರು.

ದೇವರಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಭಿವೃದ್ಧಿ ವಿಷಯದಲ್ಲಿ ಮತಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಶರಣಪ್ಪ ಸುಣಗಾರ, ದೇವರಹಿಪ್ಪರಗಿ ಪಪಂ ಅಧ್ಯಕ್ಷೆ ಜಯಶ್ರೀ ದೇವಣಗಾಂವ, ತಾಲೂಕಾ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಸಾಹೇಬಗೌಡ ಬಿರಾದಾರ, ಪಪಂ ಉಪಾಧ್ಯಕ್ಷ ರಮೇಶ ಮಸಬಿನಾಳ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಸಂಪತ್ ಕುಮಾರ ಗುಣಾರಿ, ನಗರಾಭಿವೃದ್ಧಿಕೋಶದ ಯೋಜನಾ ನಿರ್ದೇಶಕ ಬದ್ರುದ್ದಿನ್ ಸೌದಾಗರ್, ತಹಶೀಲ್ದಾರ ನಿಂಗಣ್ಣ ಬಿರಾದಾರ, ಪಪಂ ತಾಲೂಕ ಕಾರ್ಯನಿರ್ವಹಣಾಧಿ ಭಾರತಿ ಚೆಲುವಯ್ಯ ಸೇರಿದಂತೆ ಸಾರ್ವಜನಿಕರು ಪಾಲ್ಗೊಂಡಿದ್ದರು.



### ಪತ್ರಿಕಾ ಭವನ ನಿರ್ಮಾಣಕ್ಕೆ ನಿವೇಶನ ಮಂಜೂರಿಗೆ ಮನವಿ

ದೇವರ ಹಿಪ್ಪರಗಿ ಪಟ್ಟಣದಲ್ಲಿ ನೂತನ ಪತ್ರಿಕಾ ಭವನ ನಿರ್ಮಿಸಲು ನಿವೇಶನ ಹಾಗೂ ಅಗತ್ಯ ಅನುದಾನ ದೊರಕಿಸಿಕೊಡಬೇಕೆಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಸಚಿವ ಎಂ.ಬಿ.ಪಾಟೀಲರಿಗೆ ಮನವಿ ಸಲ್ಲಿಸಲಾಯಿತು. ಪತ್ರಕರ್ತರ ಮನವಿಗೆ ತಕ್ಷಣ ಸ್ಪಂದಿಸಿದ ಸಚಿವರು ಸ್ಥಳದಲ್ಲಿ ಉಪಸ್ಥಿತರಿದ್ದ ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿ ಅಫ್ರೋಜ ಅಹ್ಮದ್ ಪಟೇಲ ಅವರನ್ನು ಕರೆದು ಪತ್ರಕರ್ತರ ಮನವಿಗೆ ಶೀಘ್ರ ನಿವೇಶನ ದೊರಕಿಸಿಕೊಡಲು ಕ್ರಮಕ್ಕೆ ಸೂಚಿಸಿದರು. ಈ ವೇಳೆ ಕಾನಿಪ ತಾಲೂಕು ಅಧ್ಯಕ್ಷ ಸಂಗಮೇಶ ಉತ್ನಾಳ, ಪ್ರಧಾನ ಕಾರ್ಯದರ್ಶಿ ಶಿವಾನಂದ ಕುಂಬಾರ. ಉಪಾಧ್ಯಕ್ಷರಾದ ಶ್ರೀಧರ ನಾಡಗೌಡ, ಮಂಜುನಾಥ ಬ್ಯಾಕೋಡ, ಖಜಾಂಚಿ ಮಲ್ಲಿಕಾರ್ಜುನ ಪಟ್ಟಣಶೆಟ್ಟಿ, ಕಾರ್ಯದರ್ಶಿಗಳಾದ ಹುಸೇನ ಕೊಕಟನೂರ, ಈರನಗೌಡ ಪಾಟೀಲ, ಮಳೆಪ್ಪಗೌಡ ಬಿರಾದಾರ, ಅಶೋಕ ಗೊಲ್ಲರ, ಅಹ್ಮದ್ ಅಲಿ ಮುಲ್ಲಾ, ಸಾಯಿಬಣ್ಣ ಹಳ್ಳಿ ಸೇರಿದಂತೆ ಅನೇಕರಿದ್ದರು.

# ಸಂಸ್ಕರಣಾ ಘಟಕ ಅನುಷ್ಠಾನಕ್ಕೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ದೇಶದಲ್ಲಿ ದ್ವಿದಳ ಧಾನ್ಯಗಳಲ್ಲಿ ಮೌಲ್ಯವರ್ಧನೆ ಉತ್ತೇಜಿಸಲು ಹಾಗೂ ರೈತರ ಆದಾಯ ಹೆಚ್ಚಿಸಲು ಸಂಸ್ಕರಣಾ ಘಟಕವನ್ನು ಅನುಷ್ಠಾನಗೊಳಿಸಲು ಅರ್ಹರಿಂದ ಕೃಷಿ ಇಲಾಖೆ ಅರ್ಜಿ ಆಹ್ವಾನಿಸಿದೆ.ರೈತ ಉತ್ಪಾದಕ ಸಂಸ್ಥೆಗಳು. ಕ್ಲಸ್ಟರ್ ಮಟ್ಟದ ಒಕ್ಕೂಟಗಳು ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು (ಕಂಅಖ) ಯಾವುದೇ ನೋಂದಾಯಿತ ಸಂಸ್ಥೆಗಳು ಹಾಗೂ ವೈಯಕ್ತಿಕ ಫಲಾನುಭವಿಗಳು ಈ ಯೋಜನೆಯಡಿ ಅರ್ಜಿ ಸಲ್ಲಿಸಲು ಅರ್ಹರಾಗಿದ್ದಾರೆ.

ವೈಯಕ್ತಿಕ ಫಲಾನುಭವಿಯು ಅರ್ಹ ಫಲಾನುಭವಿಯಾಗಲು ಕನಿಷ್ಠ 21 ವರ್ಷದವರಾಗಿರಬೇಕು. ಪ್ರತಿ ಕುಟುಂಬದಿಂದ (ಪತಿ/ಪತ್ನಿ ಹಾಗೂ ಅವಿವಾಹಿತ ಮಕ್ಕಳು) ಒಂದು ಅರ್ಹ ಫಲಾನುಭವಿಗೆ ಮಾತ್ರ ಸಹಾಯಧನ ಪಡೆಯಲು ಅವಕಾಶವಿದೆ. ಯೋಜನಾ ವೆಚ್ಚದ ಶೇ 15 ರಷ್ಟು ಸ್ವಂತ ಬಂಡವಾಳ ಹೂಡಿಕೆ ಮಾಡುವ ಸಾಮರ್ಥ್ಯ ಹೊಂದಿರಬೇಕು. ಗುಂಪು ಫಲಾನುಭವಿಗಳು ಅರ್ಹರಾಗಲು ಸಂಸ್ಥೆಗಳು ಕಡ್ಡಾಯವಾಗಿ ನೋಂದಣಿಯಾಗಿ,ಕನಿಷ್ಠ 2 ವರ್ಷಕಾರ್ಯ ನಿರ್ವಹಿಸಿರಬೇಕು. ಯೋಜನಾ ವೆಚ್ಚದ ಶೇ 15 ರಷ್ಟು ಸ್ವಂತ ಬಂಡವಾಳ ಹೂಡಿಕೆ ಮಾಡುವ ಸಾಮರ್ಥ್ಯ ಹೊಂದಿರಬೇಕು. ಪರಿಶಿಷ್ಟ ಜಾತಿ, ಪಂಗಡ, ಮಹಿಳಾ ಫಲಾನುಭವಿಗಳಿಗೆ ಆಧ್ಯತೆ ನೀಡಲಾಗುವದು. ದ್ವಿದಳ ಧಾನ್ಯಗಳಲ್ಲಿ ಆತ್ಮನಿರ್ಭರತಾ ಅಭಿಯಾನ ಕಾರ್ಯಕ್ರಮದಡಿ ಯೋಜನಾ ವೆಚ್ಚದ ಶೇ. 33 ರಷ್ಟು ಸಹಾಯಧನ ಆರ್ಥಿಕ ನೆರವು ನೀಡಲಾಗುವದು. ಆಸಕ್ತರು, ಜೂನ್ 3 ರೊಳಗಾಗಿ ಹತ್ತಿರದ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಹಾಗೂ ರೈತ ಸಂಪರ್ಕ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಲು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೇಬೀಸ್ ಕಾಯಿಲೆಗೆ 16 ವರ್ಷದ ಬಾಲಕ ಬಲಿ

■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ತಾಲೂಕಿನ ಸಿದ್ದನಾಥ ಗ್ರಾಮದಲ್ಲಿ ರೇಬೀಸ್ ಕಾಯಿಲೆಗೆ ತುತ್ತಾಗಿ 16 ವರ್ಷದ ಬಾಲಕ ಮೃತಪಟ್ಟ ಘಟನೆ ಸಂಭವಿಸಿದೆ.

ಮೃತ ಬಾಲಕನನ್ನು ಅಪ್ಪು ದರಿಯಪ್ಪ ಕೋಳಮಲಿ ಎಂದು ಗುರುತಿಸಲಾಗಿದೆ.



ಎರಡು ತಿಂಗಳ ಹಿಂದೆ ಅಪ್ಪುಗೆ ನಾಯಿ ಕಚ್ಚಿ ಕಾಲಿಗೆ ಗಾಯವಾಗಿತ್ತು. ಆದರೆ ಇಂಜ-ಕ್ಷನ್‌ಗೆ ಹೆದರಿ ರೇಬೀಸ್ ಲಸಿಕೆ ಪಡೆಯಲಿಲ್ಲ. ಪಾಲಕರು ಸಹ ಸೂಕ್ತ ಗಮನ ಹರಿಸದೆ ಇರುವುದರಿಂದ ಸೋಂಕು ತೀವ್ರವಾಗಿ, ಕೊನೆಗೆ ಬಾಲಕನ ಸಾವಿಗೆ ಕಾರಣವಾಯಿತು ಎಂದು ತಿಳಿದುಬಂದಿದೆ.

## ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷ ಮತ್ತು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ರಿಂದ ಎಂ.ಬಿ.ಬಿ.ಎಸ್ ಕಲಿಕೆಗೆಹಣಕಾಸು ನೆರವು

# ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಚಿವರ ಸಹಾಯ ಹಸ್ತ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನೀಟ್ ಪಾಸಾಗಿ ಸರಕಾರಿ ಕೋಟಾದಡಿ ಎಂ.ಬಿ.ಬಿ.ಎಸ್. ಸೀಟು ಪಡೆದರೂ ಆರ್ಥಿಕ ಸಮಸ್ಯೆಯಿಂದಾಗಿ ಸಂಕಷ್ಟದಲ್ಲಿದ್ದ ಇಬ್ಬರು ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷ ಮತ್ತು ಕೈಗಾ-ರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರು ಹಣಕಾಸು ನೆರವು ನೀಡುವ ಮೂಲಕ ಸಹಾಯ ಹಸ್ತ ಚಾಚಿದ್ದಾರೆ. ಶನಿವಾರ ನಗರದಲ್ಲಿರುವ ತಮ್ಮ ಗೃಹ ಕಚೇರಿಯಲ್ಲಿ ಇಬ್ಬರು ವಿದ್ಯಾರ್ಥಿಗಳಾದ ಆಲಮೇಲದ ವಿದ್ಯಾರ್ಥಿ ಉದಯಕುಮಾರ ನಾರಾಯಣಕರ ಮತ್ತು ರತ್ನಾಪುರದ ಮನೋಹರ ಹರಗೆ ಅವರ ಎಂ.ಬಿ.ಬಿ.ಎಸ್ ಕೋರ್ಸಿನ ಬೋಧನಾ ಶುಲ್ಕ, ಊಟ ಮತ್ತು ವಸತಿ (ಹಾಸ್ಟೇಲ್ ಮತ್ತು ಮೆಸ್)ಕ್ಕೆ ಅಗತ್ಯವಾಗಿರುವ ಹಣದ ಚೆಕ್ ನ್ನು ಸಚಿವರು ವಿತರಿಸಿದರು. ಬಳಿಕ ಮಾತನಾಡಿದ ಸಚಿವರು, ವಿದ್ಯಾರ್ಥಿಗಳು ಶ್ರಮವಹಿಸಿ, ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಬೇಕು. ಶಿಕ್ಷಣಕ್ಕೆ ಅಗತ್ಯವಾಗಿರುವ ಆರ್ಥಿಕ ನೆರವನ್ನು ನೀಡಲಾಗುತ್ತಿದ್ದು, ಇದನ್ನು ಸದ್ಬಳಕೆ ಮಾಡಿಕೊಂಡು ಪೋಷಕರು ಮತ್ತು ಬಸವನಾಡು ವಿಜಯಪುರ ಜಿಲ್ಲೆಗೆ ಕೀರ್ತಿ ತರಬೇಕು ಎಂದು ಹೇಳಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ರಜಿಸ್ಟ್ರಾರ್ ಡಾ. ಆರ್.ವಿ.ಕುಲಕರ್ಣಿ ಮತ್ತು ಅಕೌಂಟ್ಸ್ ಸುಪರಿಂಟೆಂಡೆಂಟ್ ಎಸ್. ಎಸ್. ಪಾಟೀಲ, ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.



### ಸಚಿವರಿಂದ ಆರ್ಥಿಕ ನೆರವು ಪಡೆದ ವಿದ್ಯಾರ್ಥಿಗಳ ಹಿನ್ನೆಲೆ ಆಲಮೇಲದ ವಿದ್ಯಾರ್ಥಿ ಉದಯಕುಮಾರ ನಾರಾಯಣಕರ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಎಂ.ಬಿ.ಬಿ.ಎಸ್ ಸೀಟು ಪಡೆದಿದ್ದಾರೆ. ಇವರ ತಂದೆ ಸಂಜೀವಕುಮಾರ ನಾರಾಯಣಕರ ಮತ್ತು ತಾಯಿ ಮಹಾದೇವಿ ನಾರಾಯಣಕರ ಇಬ್ಬರೂ ಕೃಷಿ ಕಾರ್ಮಿಕರಾಗಿದ್ದಾರೆ. ಈ ವಿದ್ಯಾರ್ಥಿಗೆ ಎಂ.ಬಿ.ಬಿ.ಎಸ್ ಕೋರ್ಸಿಗೆ ಅಗತ್ಯವಾಗಿರುವ ರೂ.1 ಲಕ್ಷ 88, ಸಾವಿರದ 850 ಮೊತ್ತದ ಚೆಕ್ ನ್ನು ಸಚಿವರು ವಿತರಿಸಿದರು.

ಎರಡನೇ ವಿದ್ಯಾರ್ಥಿ ತಿಕೋಟಾ ತಾಲೂಕಿನ ರತ್ನಾಪುರದ ಮನೋಹರ ಹರಗೆ ಬೆಂಗಳೂರಿನಲ್ಲಿರುವ ಬಿ.ಎಂ. ಅರ್.ಸಿ.ಐ ವೈದ್ಯಕೀಯ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್ ಸೀಟು ಪಡೆದಿದ್ದಾನೆ. ಈ ವಿದ್ಯಾರ್ಥಿಗೆ ಬೇಕಾದ ರೂ. 1 ಲಕ್ಷ 28 ಸಾವಿರದ 400 ಮೊತ್ತದ ಚೆಕ್ ನ್ನು ಸಚಿವರು ವಿತರಿಸಿದರು. ವಿದ್ಯಾರ್ಥಿಯ ತಂದೆ ಬಸಪ್ಪ ಹರಗೆ ಮತ್ತು ತಾಯಿ ಯಮನವ್ವ ಹರಗೆ ರೈತರಾಗಿದ್ದು, ಎರಡು ಎಕರೆ ಹೊಲ ಹೊಂದಿದ್ದಾರೆ.

## ಕರ್ನಾಟಕ ಮಾಹಿತಿ ಹಕ್ಕು ಆಯೋಗದ ಆಯುಕ್ತ ರುದ್ರಣ್ಣ ಹರ್ತಿಕೋಟೆ ಅಧಿಕಾರಿಗಳಿಗೆ ಸೂಚನೆ

# ಮಾಹಿತಿ ಹಕ್ಕು ಕಾಯ್ದೆಯನ್ನು ಸಂಪೂರ್ಣ ಅಧ್ಯಯನ ಮಾಡಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮಾಹಿತಿ ಹಕ್ಕು ಕಾಯ್ದೆ ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ಜನಪರ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಭದ್ರ ಬುನಾದಿಯಾಗಿದ್ದು, ಇಂತಹ ಜನಪರವಾಗಿರುವ ಈ ಕಾಯ್ದೆಯನ್ನು ಪ್ರತಿಯೊಬ್ಬ ಅಧಿಕಾರಿಗಳು ಅಧ್ಯಯನ ಮಾಡಿಕೊಂಡು ಸರಾಗ ಆಡಳಿತಕ್ಕೆ ಕೈಜೋಡಿಸಬೇಕು ಎಂದು ಕರ್ನಾಟಕ ಮಾಹಿತಿ ಹಕ್ಕು ಆಯೋಗದ ಆಯುಕ್ತ ರುದ್ರಣ್ಣ ಹರ್ತಿಕೋಟೆ ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆ ಕು-ರಿತು ಅರಿವು ಮೂಡಿಸುವ ವಿಶೇಷ ತರಬೇತಿ ಕಾರ್ಯಾಗಾರ ಮತ್ತು ಪ್ರಗತಿ ಪರಿಶೀಲನಾ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಮಾಹಿತಿ ಹಕ್ಕಿನಡಿ ಅರ್ಜಿದಾರ ಮಾಹಿತಿ ಕೋರಿ ಅರ್ಜಿ ಸಲ್ಲಿಸಿದರೆ, 30 ದಿನಗಳೊಳಗಾಗಿ ಉತ್ತರ ಕೊಡಬೇಕು. ಅರ್ಜಿದಾರ ಕೋ-ರಿದ ಮಾಹಿತಿ ನೀಡಲು ಯಾವುದೇ ಕಾರಣ-ಕ್ಕೂ ಹಿಂಜರಿಯಬೇಡಿ. ಒಂದು ವೇಳೆ ನೀವು ಮಾಹಿತಿ ನೀಡಲು ಹಿಂಜರಿದರೆ ಅದು ಅಪಾರ್ಥಕ್ಕೆ ಕಾರಣವಾಗಲಿದೆ. ಹಾಗಾಗಿ ಪ್ರಥಮ ಮೇಲ್ಮನವಿಗೆ ಹೋಗುವ ಮುನ್ನವೇ ಪ್ರತಿಯೊಬ್ಬ ಅಧಿಕಾರಿಯೂ ಉತ್ತರ ನೀಡಬೇಕು. ದ್ವಿತೀಯ ಮೇಲ್ಮನವಿಗೆ ಬಂದಾಗ ಅದನ್ನು ನಾವು ನೋಡಿಕೊಳ್ಳುತ್ತೇವೆ ಎಂದರು.



ಸರ್ಕಾರದ ಕಾರ್ಯಕ್ರಮಗಳಲ್ಲಿ ಪಾರದರ್ಶಕತೆ ತರುವುದರ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಇನ್ನಷ್ಟು ಗಟ್ಟಿಗೊಳಿಸಬೇಕು ಎಂಬ ದೂರದೃಷ್ಟಿಯಿಂದ ಜಾರಿಗೆ ತಂದಿರುವ ಮಾಹಿತಿ ಹಕ್ಕು ಕಾಯ್ದೆ ಜನಪರವಾಗಿದೆ. ಆದರೆ ಈ ಕಾಯ್ದೆ ದುರುಪಯೋಗ ಸಲ್ಲದು ಎಂದು ಹರ್ತಿಕೋಟಿ ಹೇಳಿದರು.

ಸರ್ಕಾರದ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರುವುದು ಹಾಗೂ ಪ್ರಜಾಪ್ರಭುತ್ವಗಟ್ಟಿಗೊಳಿಸಬೇಕು ಎಂಬ ಆಶಯದೊಂದಿಗೆ ಈ ಕಾಯ್ದೆ ಅಸ್ತಿತ್ವಕ್ಕೆ ಬಂದಿದೆ ಎಂದರು.



"ಈ ಕಾಯ್ದೆ ಸಾರ್ವಜನಿಕರಿಗೆ ಪಾರದರ್ಶಕವಾಗಿದೆ. ಅವರಿಗೆ ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಉತ್ತರ ಒದಗಿಸಬೇಕು. ಸಾರ್ವಜನಿಕ ಮಾಹಿತಿ ಕೊಡಬೇಕು."

■ ಡಾ. ಆನಂದ .ಕೆ
ಜಿಲ್ಲಾಧಿಕಾರಿ, ವಿಜಯಪುರ

ಆಯುಕ್ತರಾದ ರಾಜಶೇಖರ ಎಸ್. ಮಾತನಾಡಿ, ಅಧಿಕಾರಿಗಳು ಸಾರ್ವಜನಿಕರು ಮತ್ತು ಸರ್ಕಾರದ ಕೊಂಡಿ ಇದ್ದಂತೆ ಎಂಬುದು ಮಾಹಿತಿ ಹಕ್ಕು ಕಾಯ್ದೆಯ ಆಶಯವಾಗಿದೆ. ಪಾರದರ್ಶಕವೇ ಈ ಕಾಯ್ದೆಯ ಮೂಲ ಮಂತ್ರ. ಈ ಕಾಯ್ದೆ ಜಾರಿಗೆ ಮುನ್ನವೇ ಕೆಲವರಿಗಷ್ಟೇ ಮಾಹಿತಿ ಗೊತ್ತಾಗುತ್ತಿತ್ತು. ಆದರೆ ಈ ಕಾಯ್ದೆ ಬಂದ ಬಳಿಕ ಪ್ರತಿಯೊಬ್ಬರಿಗೂ ಮಾಹಿತಿ ಸಿಗುತ್ತಿದೆ ಎಂದರು.

### ರಾಜ್ಯದಲ್ಲಿ 76 ಸಾವಿರಕ್ಕೂ ಹೆಚ್ಚು ಅರ್ಜಿಗಳು ಬಾಕಿ

ರಾಜ್ಯದಲ್ಲಿ 76 ಸಾವಿರಕ್ಕೂ ಹೆಚ್ಚು ಅರ್ಜಿಗಳು ವಿಲೇವಾರಿ ಬಾಕಿ ಇವೆ. ಬೆಳಗಾವಿ ವಿಭಾಗ 3 ನೇ ಸ್ಥಾನದಲ್ಲಿದೆ. ಹೀಗೆಯೇ ಸಾಕಷ್ಟು ಅರ್ಜಿಗಳು ವಿಲೇವಾರಿಗೆ ಬಾಕಿಯಿವೆ. ಇದು ಆಗಬಾರದು ಎಂದ ಆಯುಕ್ತರು, ವಿಜಯಪುರ ಜಿಲ್ಲೆಯಲ್ಲೂ 41ಎ 41 ಬಿ ಅರ್ಜಿಗಳನ್ನು ಶೀಘ್ರದಲ್ಲೇ ವಿಲೇವಾರಿ ಮಾಡಬೇಕು. ಸೂಕ್ತ ಅಧ್ಯಯನ ನಡೆಸಿದರೆ, ಕಾನೂನಿನ ತೊಡಕಿಲ್ಲದೇ ಅರ್ಜಿ ವಿಲೇವಾರಿ ಮಾಡಬಹುದಾಗಿದೆ ಎಂದರು.

ಇನ್ನೋರ್ವ ಆಯುಕ್ತ ಪ್ರಕಾಶ ನಾರಾಯಣ ಚನ್ನಾಳ ಅವರು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಂವಾದ ನಡೆಸಿದರು. ಕಾರ್ಯಾಗಾರದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ರಿಷಿ ಆನಂದ, ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಸೇರಿದಂತೆ ಬೇರೆ ಬೇರೆ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಮಿಡಿಯ ಎದೆಯ ಪಿಸುಮಾತು

■ ಉದಯರಶ್ಮಿ ದಿನಪತ್ರಿಕೆ

ಮನದ ಮನ್ಮಥನಿಗೆ

ಇಬ್ಬರೂ ಕೂಡಿ ಕಳೆದ ಆ ಕ್ಷಣಗಳು ನನ್ನ ಪಾಲಿನ ಅಮೂಲ್ಯ ಆಸ್ತಿ. ಸವಿ ನೆನಪುಗಳ ಸುಳಿಯಲ್ಲಿ ಸಿಲುಕಿ ಮನಸ್ಸು ಇಂದು ಅಕ್ಷರಗಳ ರೂಪದಲ್ಲಿ ನಿನಗೆ ಸನಿಹವಾಗಲು ಬಯಸುತ್ತಿದೆ. ಈ ಪತ್ರದ ಪ್ರತಿಯೊಂದು ಸಾಲು ನನ್ನ ಹೃದಯ ಬಡಿತವ ಮಿಡಿತವ ಹೇಳುತಿವೆ. ಇದು ನಿನಗಾಗಿ ಮಿಡಿಯುವ ಎದೆಯ ಪಿಸುಮಾತು

ತುಂಟಾಟದಲ್ಲಿ ನಿನ್ನ ತುಂಟ ನಗುವಿನ ಅಲೆಗಳು ನನ್ನ ಹೃದಯದ ವೀಣೆಯನ್ನು ಮೇಲಿಂದ ಮೇಲೆ ಮೀಟದೇ ಇರುತ್ತಿರಲಿಲ್ಲ. ನೀನಾಡುತ್ತಿದ್ದ ಕವಿ ಮಾತುಗಳು ಹೃದಯದ ದಡಕ್ಕೆ ಅಲೆಗಳಂತೆ ಅಪ್ಪಳಿಸುವುದನ್ನು ನನ್ನಿಂದ ಮರೆಯಲು ಸಾಧ್ಯವಾಗುತ್ತಿಲ್ಲ. ಈರ್ವರೂ ಹುಡುಗಾಟದಿಂದ ಒಬ್ಬರಿಗೊಬ್ಬರು ಕಾಲೆಳೆಯುತ್ತ ಕಳೆದ ಸಂತೋಷ ವಿವರಿಸಲು ಪದಗಳೇ ಸಿಗುತ್ತಿಲ್ಲ. ಹಗಲಿನ ಪ್ರತಿ ಕ್ಷಣದಲ್ಲೂ ನೀನೇ ಆವರಿಸಿರುವೆ. ರಾತ್ರಿ ಹಾಸಿಗೆಗೆ ಹೋಗಿ ಕಣ್ಮುಚ್ಚುವುದೇ ತಡ ನಿನ್ನ ಕುಡಿ ನೋಟದ ನೋಟ ಮತ್ತೆ ಮತ್ತೆ ಕಣ್ತೆರಸುತ್ತದೆ. ಕಣ್ರೆಪ್ಪೆಗಳನ್ನು ಅಂಟಿಸದಂತೆ ಕಾಡುತ್ತದೆ.

ಆ ನಿನ್ನ ಕಾಂತಿ ತುಂಬಿದ ಕಂಗಳಲ್ಲಿ ನನ್ನ ಪ್ರಪಂಚವನ್ನು ಕಂಡುಕೊಂಡಿರುವೆ. ಟ್ರಿಮ್ ಮಾಡಿದ ಮೀಸೆ ಗಡ್ಡ ಪುರುಷತ್ವದ ಸಂಕೇತ ಮಾತ್ರವಲ್ಲ. ಮೀಸೆ ಕೆಳಗಿನ ತುಂಟ ಕಿರುನಗು ನನ್ನ ಹೃದಯ ಕದಿಯಲು ಸಾಕು. ಹುರಿಗಟ್ಟಿಸಿದ ಮೀಸೆಯನ್ನು ತಿರುವಿದಾಗ ರಾಜನಂತೆ ಕಾಣುವೆ. ಕಟ್ಟು ಮಸ್ತಾದ ದೇಹ, ರೇಷ್ಮೆಯಂತಿರುವ ಸೋಂಪಾದ ತಲೆಗೂದಲು, ವಿಶಾಲವಾದ ಭುಜಗಳು, ಆಜಾನುಬಾಹು ಹೊಂದಿದ






ವ್ಯಕ್ತಿತ್ವ ಎಂಥ ಹುಡುಗಿಯರನ್ನೂ ನಿನ್ನತ್ತ ಸೆಳೆಯುತ್ತದೆ. ವಿಶಿಷ್ಟ ಲಯ ಹೊಂದಿದ ನಿನ್ನ ನಡಿಗೆ ಕಂಡಾಗ ಶಿಲ್ಪಿ ಕೆತ್ತಿದಂತಿರುವ ಬಲಿಷ್ಟವಾದ ಜೀವಂತ ಮೂರ್ತಿಯು ನನ್ನನ್ನು ಕೈ ಹಿಡಿದು ಜೀವನದುದ್ದಕ್ಕೂ ನಡೆಸುತ್ತದೆಂಬ ನಂಬಿಕೆ ಮೂಡುತ್ತದೆ. ನಿನ್ನ ಸೌಂದರ್ಯಕ್ಕಿಂತಲೂ ಮಿಗಿಲಾದ ಅಂತಃಕರಣ ಹೊಂದಿದ ನಿನ್ನ ವ್ಯಕ್ತಿತ್ವ ನನಗೆ ಸುರಕ್ಷಿತ ಭಾವ ಮೂಡಿಸುತ್ತದೆ. ಹರವಾದ ನಿನ್ನೆದೆಯಲ್ಲಿ ನನ್ನ ಮುಖ ಹುದುಗಿಸಿದಾಗ ನಿನ್ನ ಬಾಹುಗಳು ನನಗೆ ಅತ್ಯಂತ ಸುರಕ್ಷಿತ ತಾಣದಂತೆ ಭಾಸವಾಗುತ್ತದೆ.


ಇನ್ನು ಕಾಲೇಜಿನ ಬಂಗಾರದ ದಿನಗಳನ್ನು ನೆನೆದರೆ ಸಾಕು ಸಮಯ ಸರಿದಿದ್ದೇ ಗೊತ್ತಾಗುವುದಿಲ್ಲ. ನನ್ನ ಪಾಲಿಗಂತೂ ಆ ಎಲ್ಲ ದಿನಗಳು ಸುವರ್ಣಾಕ್ಷರದಿಂದ ಬರೆಯಲ್ಪಟ್ಟಂತೆ ಅನಿಸುತ್ತವೆ. ಕಾಲೇಜಿನ ಅವಧಿಗಳು ಯಾವಾಗ ಮುಗಿಯುತ್ತವೆಯೋ ಎಂದು ಕಾಯುತ್ತಿದ್ದೆ. ಅವಧಿಗಳ ನಂತರ ಪಾರ್ಕಿನಲ್ಲಿ ನಮ್ಮಿಬ್ಬರ ಭೇಟಿ. ಪ್ರತಿಯೊಂದು ಭೇಟಿಯು ಹೊಸ ಹೊಸ ಅನುಭವವನ್ನು ತರುತ್ತಿತ್ತು. ಪ್ರತಿಬಾರಿಯೂ ಎದೆಯೊಳಗೆ ಯಾವುದೋ ಒಂದು ಹೊಸ ಲಯ ಶುರುವಾಗುತ್ತಿತ್ತು. ಚೆಂದದ ಪ್ರೀತಿಯನ್ನು ಮನಸ್ಸಿಗೆ ತಾಗಿಸುತ್ತಿತ್ತು. ಆಹಾ! ಈ ಪ್ರೀತಿ ಜೀವನಪೂರ್ತಿಯೆಲ್ಲ ಹೀಗೆ ಮುಂದುವರೆಯಲಿ ಎಂದು ಮನಸ್ಸು ಬಯಸುತ್ತಿತ್ತು. ನಿನ್ನ ಒರಟಾದ ಬೆರಳುಗಳ ನಡುವೆ ನನ್ನ ಪುಟ್ಟ ಬೆರಳುಗಳಿಗೆ ಜಾಗ ನೀಡಿ ಅವುಗಳೊಂದಿಗೆ ಮೆಲ್ಲಗೆ ಮುದ್ದಿನಾಟ ಆಡುತ್ತಿದ್ದರೆ ಈ ಸಮಯ ಹೀಗೆ ನಿಲ್ಲಲಿ ಎಂದನಿಸದೇ ಇರುತ್ತಿರಲಿಲ್ಲ.

ಜಗವನ್ನೆಲ್ಲ ಮರೆತು ಬರಿ ನಿನ್ನಲ್ಲೇ ಒಂದಾಗಬೇಕು ಎನಿಸುವ ಕ್ಷಣಗಳವು. ಮಾತಿನ ಚತುರತೆಯ ನಡುವೆ ಅಡಗಿರುವ ತುಂಟತನವು ಮುಂದುವರೆದಾಗ ಸಿಹಿ ಜೇನಿನ ತುಟಿಗಳು ನನಗಾಗಿಯೇ ಮೀಸಲಿರಲಿ ಎಂದು ಆಶಿಸುತ್ತಿದ್ದೆ. ಹಾಗೆ ಮನದಲ್ಲಿ ಅಂದುಕೊಂಡಾಗ ನಾಚಿಕೆಯಿಂದ ಕೆನ್ನೆ ಕೆಂಪಾಗುತ್ತಿತ್ತು. ಕೆಂಪಾದ ಕೆನ್ನೆ ಕಂಡು ನೀನು ಪಕ್ಕನೇ ಕೆನ್ನೆಗೆ ಸಿಹಿಮುದ್ರೆಯನ್ನೊತ್ತುತ್ತಿದ್ದೆ. ಒಮ್ಮೊಮ್ಮೆ ನಾನೇ ಸಂಜೆಗತ್ತಲಾಗುವವರೆಗೂ ನಿನ್ನ ಅಲ್ಲೇ ಕೂ–ರಿಸುತ್ತಿದ್ದೆ. ನಿನ್ನುಸಿರಿನ ಬಿಸಿ ಸೋಕಿದಾಗ ಮನಸ್ಸು ಹತೋಟಿ ತಪ್ಪುತ್ತಿತ್ತು. ಕೆಂದುಟಿಗಳ ಸಿಹಿ ಸವಿಯಲು ನಾನೇ ಮುಂದಾಗಿದ್ದನ್ನು ನೆನೆದರೆ ಮೈಯಲ್ಲಿ ಈಗಲೂ ನಡುಕ ಉಂಟಾಗುತ್ತದೆ. ಪ್ರಪಂಚದ ಸುಖವೆಲ್ಲ ನಿನ್ನ ಸಿಹಿ ಮುತ್ತಿನಲ್ಲೇ ಅಡಗಿದಂತಿದೆ ಆಗಾಗ ಗಡ್ಡದ ಮೃದು ಸ್ಪರ್ಶ ಕಚಗುಳಿಯಿಡುತ್ತಿತ್ತು. ಕಂಗಳಲ್ಲಿ ನನಗಾಗಿ ಹೊಳೆಯುತ್ತಿದ್ದ ನಿನ್ನ ಪ್ರೀತಿಗೆ ನನ್ನನ್ನು ನಾನು ಮರೆಯುತ್ತಿದ್ದೆ.

ಚತುರ ಮಾತುಗಳನ್ನೂ ದಾಟಿ ಶೃಂಗಾರವನ್ನೂ ಮಾತಿನಲ್ಲಿ ಎಳೆದು ತರುತ್ತಿದ್ದುದು ನನಗೆ ತುಂಬಾ ಇಷ್ಟವಾಗುತ್ತಿತ್ತು. ಅದರಲ್ಲೂ ರತಿಯೋನ್ಮತ್ತ ವಿರಹಿಗಳ ಚಿತ್ರಣವನ್ನು ಕಣ್ಮುಂದೆ ತರುವಲ್ಲಿ ನೀನು ಸರ್ವಶಕ್ತ. ಇದನ್ನೆಲ್ಲ ಅದಾವ ಶಾಲೆಯಲ್ಲಿ ಕಲಿತಿದ್ದಿಯೋ ಗೊತ್ತಾಗುತ್ತಿಲ್ಲ. ಪಾರ್ಕಿನಲ್ಲಿ ಭೇಟಿಯಾದಗಲೊಮ್ಮೆ



ತಣ್ಣನೆಯ ತಂಗಾಳಿಗೆ ಮೈಯೊಡ್ಡಿ ನುಡಿಯುತ್ತಿದ್ದ ಮಾತುಗಳೆಲ್ಲ ರಸಕಾವ್ಯದಂತೆ ಅನಿಸುತ್ತಿದ್ದವು. ಇದೆಲ್ಲ ಸಾಲದೆಂಬಂತೆ ನನ್ನನ್ನೂ ಶೃಂಗಾರ ಸಾಹಿತ್ಯದ ಸಂಭಾಷಣೆಗೆ ಎಳೆಯುತ್ತಿದ್ದ ತುಂಟಕವಿ ನೀನು. ಸಹವಾಸ ದೋಷವೆಂಬಂತೆ ನಾನೂ ಬರಬರುತ್ತ ಪ್ರೇಮ ಕವಿತೆಗಳ ಹುಚ್ಚು ಹಚ್ಚಿಸಿಕೊಂಡೆ. ಅದ–ರಿಂದ ನಿನ್ನ ಮೇಲಿನ ಪ್ರೀತಿಯ ಹುಚ್ಚು ಮತ್ತಷ್ಟು ಹೆಚ್ಚಾಯಿತು. ಜಿದ್ದಿಗೆ ಬಿದ್ದವಳಂತೆ ಕವಿತೆಗಳನ್ನು ಗೀಚತೊಡಗಿದೆ. ಆದರೆ ನಿನ್ನನ್ನು ಸೋಲಿಸಲಾಗದು ಎಂದು ಒಳಮನಸ್ಸು ಹೇಳುತ್ತಿತ್ತು. ನೀನು ಮೊದಲೇ ಆಶುಕವಿ. ನಿನ್ನ ಕವಿತ್ವಕ್ಕೆ ಮನಸೋಲದ ಹುಡುಗಿಯ–ರಿಲ್ಲ. ಕಾಲೇಜಿನ ಜಂಭದ ಹುಡುಗಿಯರೂ ನಿನ್ನ ಕಾವ್ಯ ಕೇಳಲು ಹಾತೊರೆಯುತ್ತಿದ್ದರು. ಹುಡುಗರನ್ನು ಕಣ್ಣೆತ್ತಿ ನೋಡದ ಹುಡುಗಿಯರು ನಿನ್ನ ಮೇಲೆ ಆಸೆ ಕನಸುಗಳನ್ನು ಚಿಗುರಿಸುವಂತೆ ಮಾಡುತ್ತಿದ್ದೆ. ಅವರ ಹೃದಯದ ವೀಣೆ ಮೀಟುವಂತೆ ಮಾಡುತ್ತಿದ್ದೆ. ಕೆಲವೊಮ್ಮೆಯಂತೂ ನನ್ನ ವಶೀಲಿ ಹಚ್ಚಿ ನಿನ್ನಿಂದ ಕವಿತೆ ಕೇಳಲು ದುಂಬಾಲು ಬೀಳುತ್ತಿದ್ದರು ಧಿಮಾಕಿನ ಹುಡುಗಿಯರು. ಅದು ನನಗೆ ದೊಡ್ಡ ಪ್ರತಿಷ್ಠೆಯ ವಿಷಯವೆನಿಸುತ್ತಿತ್ತು.



ಹೊಂಬಣ್ಣದ ಮೈಬಣ್ಣದ ನನ್ನ ಕಂಡಾಗಲಂತೂ ತುಂಬಿ ತುಳುಕುತ್ತಿದ್ದ ಯೌವ್ವನ ಭರಿತ ನನ್ನೆದೆಯನ್ನು ಗುರಿಯಾಗಿರಿಸಿ ಕವಿತೆಯಲ್ಲೇ ಮಾತನಾಡುವುದನ್ನು ಶುರು ಮಾಡುತ್ತಿದ್ದೆ. ನನ್ನ ಮೈಮಾಟದ ಸೌಂದರ್ಯವನ್ನು ಪದಗಳಲ್ಲಿ ಹಿಡಿದು ಹಾಕುವ ರಸಿಕ ಗೆಳೆಯ ನೀನಾಗಿದ್ದೆ. ರಸಿಕತೆಯ ಸೆಲೆ ನಿನ್ನಲ್ಲಿ ಮನೆ ಮಾಡಿತ್ತು. ನಿನ್ನ ಗೆಳೆಯರು ಮನೋಹರ ಶೃಂಗಾರದ ಬಣ್ಣನೆಗೆ ಮರುಳಾಗಿ ಮೂರು ಹೊತ್ತು ನಿನ್ನೊಂದಿಗೆ ಅಂಟಿಕೊಂಡೇ ಇರುತ್ತಿದ್ದರು. ಗೆಳೆಯಾ ರಸಿಕರ ರಾಸಕ್ಕೆ ಪ್ರೇರಣೆಯಂತಿರುತ್ತದೆ ನಿನ್ನ ಕಾವ್ಯ ಎಂದು ಹಾಡಿ ಹೊಗಳುತ್ತಿದ್ದರು. ವಿರಹಿಗಳಲ್ಲಿ ಮತ್ತಷ್ಟು ಇನ್ನಷ್ಟು ಪ್ರೀತಿ ಪಕ್ಕಾಗುವಂತೆ ಮಾಡುತ್ತಿ ಎಂದು ಬ್ರೆಕ್‌ಅಪ್ ಆದ ಗೆಳೆಯರೆಲ್ಲ ನಿನ್ನ ಸುತ್ತುವರೆಯುತ್ತಿದ್ದರು.

ಅರೆಗಳಿಗೆ ಕಣ್ಣೆದುರು ಇಲ್ಲದಿದ್ದರೂ ನೀರಿನಿಂದ ತೆಗೆದ ಮೀನಿನಂತಾಗುವೆ. ಅಂಥದ್ದರಲ್ಲಿ ಕಾಲೇಜಿನ ದಿನಗಳು ಮುಗಿದ ಮೇಲೆ ಉದ್ಯೋಗ ಹುಡುಕುತ್ತ ದೂರವಾಗಿರುವೆ. ನಿನ್ನೆ ನಿನ್ನ ಗೆಳೆಯನಿಂದ ಗೊತ್ತಾಯಿತು ನೀನೀಗ ಒಳ್ಳೆಯ ಉದ್ಯೋಗದಲ್ಲಿರುವೆ. ನನ್ನನ್ನು ನಿನ್ನ ಬಾಳ ಸಂಗಾತಿಯಾಗಿಸಿಕೊಳ್ಳಲು ತುದಿಗಾಲಲ್ಲಿ ಕಾಯುತ್ತಿರುವೆ ಎಂದು. ನಮ್ಮಿಬ್ಬರ ನಡುವೆ ಇರುವುದು ಕೇವಲ ಆಕರ್ಷಣೆಯಲ್ಲ. 'ನಿಜವಾದ ಪ್ರೀತಿ: ನನ್ನನ್ನು ನಾನು ಕಳೆದುಕೊಂಡು ನಿನ್ನಲ್ಲಿ ನನ್ನನ್ನೇ ನಾನು ಕಂಡುಕೊಳ್ಳುವಂಥ–



'ದು.' ನನ್ನ ಜೀವ ನಿನ್ನೊಲವಿಗೆ ಮಿಡಿಯುತ್ತಿದೆ. ನಿನ್ನ ಮೌನದಲ್ಲೂ ನನಗೆ ವಿರಹದ ನೂರಾರು ಕವಿತೆಗಳು ಕೇಳುತ್ತಿವೆ. ನಿನ್ನ ಪ್ರೀತಿಯಲ್ಲಿ ಜೀವನವು ಒಂದು ಸುಂದರ ರಸಕಾವ್ಯದಂತೆ ಭಾಸವಾಗುತ್ತಿದೆ. ರತಿಕ್ರೀಡೆ ಸಂಕೇತದಂತಿರುವ ಕಾವ್ಯಗಳಿಂದ ರಸದೂಟ ಮಾಡುವ ಸಮಯ ಬಂದಾಗಿದೆ. ನಿನ್ನ ಪ್ರೀತಿಯ ಸಾಂಗತ್ಯದಲ್ಲಿ ನನ್ನನ್ನು ಪೂರ್ತಿಯಾಗಿ ಕಳೆದುಕೊಳ್ಳಲು ಸಿದ್ಧಳಾಗಿದ್ದೇನೆ. ಭಾವ ಮಿಲನದ ತುಂಟ ಪ್ರೀತಿಯ ರಂಗಿನಾಟದ ಕ್ಷಣಗಳಿಗಾಗಿ ಕಾಯುತಿರುವೆ.

**ಇಂತಿ ನಿನ್ನ ರತಿ**



ಲೇಖನ.
ಜಯಶ್ರೀ.ಜೆ. ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ
ಮೊ: 9449234142



## ಗಳಂಗಳಪ್ಪ ಪಾಟೀಲ್ ಬಸವಾದಿ ಶರಣ ಸಾಹಿತ್ಯ ಕೇಂದ್ರದ ಸಭೆ

ಕಲಬುರಗಿ:ಗುಲ್ಬರ್ಗ ವಿಶ್ವವಿದ್ಯಾಲಯದ ಗಳಂಗಳಪ್ಪ ಪಾಟೀಲ್ (ಎಸ್ ಬಿ ಪಾಟೀಲ್) ಬಸವಾದಿ ಶರಣ ಸಾಹಿತ್ಯ ಕೇಂದ್ರದ ಸಭೆ ಕುಲಪತಿಗಳಾದ ಡಾ. ಶಶಿಕಾಂತ ಉಡಿಕೇರಿ ಅವರ ಅಧ್ಯಕ್ಷತೆಯಲ್ಲಿ ಜರುವಿತು .

ಸಭೆಯಲ್ಲಿ ಕೇಂದ್ರವು ಗುಲ್ಬರ್ಗ ಆಕಾಶವಾಣಿಯ ಸಹಯೋಗದೊಂದಿಗೆ ರಾಜ್ಯಮಟ್ಟದಲ್ಲಿ ಪ್ರಸಾರವಾಗುವ ಪ್ರಾಯೋಜಿತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಚರ್ಚಿಸಿತು. ಜಿಲ್ಲೆಯ ವಿವಿಧ ಶಾಲಾ ಕಾಲೇಜುಗಳ ಸಹಯೋಗದೊಂದಿಗೆ ಶರಣರ ಸಂದೇಶಗಳನ್ನು ಸಾರುವ ಉಪನ್ಯಾಸಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಯಿತು . ಅಜ್ಞಾತ ಶರಣರ ಕು–ರಿತಾಗಿರುವ ಸಂಶೋಧನಾತ್ಮಕ ಲೇಖನಗಳನ್ನು ಸಂಪಾದಿಸಿ ಪುಸ್ತಕಗಳನ್ನು ಪ್ರಕಟಿಸಲು ಸಮಾಲೋಚಿಸಲಾಯಿತು .ವಚನ ಸಾಹಿತ್ಯ ಕು–ರಿತಾಗಿರುವ ಡಿಪ್ಲೊಮಾ/ ಸರ್ಟಿಫಿಕೇಟ್ ಕೋರ್ಸ್ ಗಳನ್ನು ಆರಂಭಿಸಲು ಚಿಂತಿಸಲಾಯಿತು .

ಸಭೆಯಲ್ಲಿ ಕುಲಸಚಿವರಾದ ಡಾ . ರಮೇಶ ಲಂಡನ್ ಕರ್ ,ಕೇಂದ್ರದ ನಿರ್ದೇಶಕರಾದ ಡಾ. ಎಸ್. ಎಂ . ಹನಗೂಡಿಮಠ, ಖಾಯಂ ಸದಸ್ಯರಾದ ಬಂಡಪ್ಪ ಕೇಸುರ್ ,ಡಾ. ವಿ ಜಿ ಅಂದಾನಿ , ಸಲಹಾ ಸಮಿತಿ ನಿರ್ದೇಶಕರಾದ ಡಾ. ಆನಂದ ಪಾಟೀಲ ಸಿದ್ಧಾಮಣಿ .ಡಾ. ಗಣಪತಿ ಸಿನ್ನೂರ್ , ಡಾ. ವೀರಶೆಟ್ಟಿ ಬಿ ಗಾರಂಪಳ್ಳಿ ಹಾಜ–ರಿದ್ದರು



## ಜಗತ್ತಿಗೆ ಯುದ್ಧ ಬೇಡ, ಬುದ್ಧ ಬೇಕು : ಡಾ.ವಂಟಿ

ಕಲಬುರಗಿ: ಯುದ್ಧ, ಹಿಂಸೆ, ಅನ್ಯಾಯ, ಅಶಾಂತಿ, ಶೋಷಣೆ, ಭಯೋತ್ಪಾದನೆಯಂತಹ ಜಾಗತಿಕ ತಲ್ಲಣಗಳಿಂದ ಬಳಲುತ್ತಿರುವ ಪ್ರಸ್ತುತ ಜಗತ್ತಿಗೆ ಮಹಾತ್ಮ ಗೌತಮ ಬುದ್ಧರು ಸಾವಿರಾರು ವರ್ಷಗಳ ಹಿಂದೆಯೇ ನೀಡಿ, ಆಚರಿಸಿ ತೋರಿಸಿರುವ ತತ್ವಗಳು ಔಷಧಿಯಂತೆ ಕಾರ್ಯಮಾಡುತ್ತವೆ. ಇಂದು ಜಗತ್ತಿಗೆ ಯುದ್ಧ ಬೇಡ, ಬುದ್ಧ ಬೇಕಾಗಿದೆ ಎಂದು ಸಾಮಾಜಿಕ ಚಿಂತಕ ಡಾ.ಸುನೀಲಕುಮಾರ ಎಚ್.ವಂಟಿ ಮಾರ್ಮಿಕವಾಗಿ ಹೇಳಿದರು. ನಗರದ ಸಾರ್ವಜನಿಕ ಉದ್ಯಾನವನದಲ್ಲಿ ಸುಜಯ ಶಿಕ್ಷಣ ಮತ್ತು ಕಲ್ಯಾಣ ಸಂಸ್ಥೆ, ಬಸವೇಶ್ವರ ಸಮಾಜ ಸೇವಾ ಬಳಗ ಮತ್ತು ಮಹಾದೇವಿ ನಾದ ಮಧುರ ಸಾಹಿತ್ಯ ಮತ್ತು ಸಾಂಸ್ಕೃತಿಕ ಸೇವಾ ಸಂಸ್ಥೆ ಇವುಗಳ ವತಿಯಿಂದ ಶುಕ್ರವಾರ ಏರ್ಪಡಿಸಲಾಗಿದ್ದ 2570ನೇ ಬುದ್ಧ ಪೂರ್ಣಿಮೆಯಲ್ಲಿ ಬುದ್ಧವಂದನೆ ಸಲ್ಲಿಸಿ, ನಂತರ ಅವರು ಮಾತನಾಡಿದರು.

ಉಪನ್ಯಾಸಕ, ಚಿಂತಕ ಎಚ್.ಬಿ.ಪಾಟೀಲ, ಕಜಾಪ ಜಿಲ್ಲಾಧ್ಯಕ್ಷ ಎಂ.ಬಿ.ನಿಂಗಪ್ಪ ಮಾತನಾಡುತ್ತಾ, ಪ್ರಸ್ತುತ ಸಮಾಜದಲ್ಲಿಯೂ ಜನರು ಮೌಢ್ಯತೆ, ಕಂದಾಚಾರ, ಅಂಧಶ್ರದ್ಧೆಗಳಂತಹ ಆಚ–ರಣೆಯಲ್ಲಿರುವುದು ಬೇಸರದ ಸಂಗತಿಯಾಗಿದ್ದು, ಇಂತಹ ಅನಿಷ್ಠತೆಗಳಿಂದ ಹೊರಬರಬೇಕು. ವೈಚಾ–ರಿಕತೆ ಮೈಗೂಡಿಸಿಕೊಳ್ಳಬೇಕು. ಬುದ್ಧ–ಬಸವ–ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ತತ್ವಗಳು ಅಳವಡಿಸಿಕೊಳ್ಳಬೇಕು. 'ಬುದ್ಧ' ಎಂದರೆ 'ಶಾಂತಿ', 'ಜ್ಞಾನ'ದ ಸಂಕೇತವಾಗಿದ್ದಾರೆ. ಅವರ ತತ್ವದ ಮಹಾ ಬೆಳಕಿನಲ್ಲಿ ಸಾಗಿದರೆ ಬದುಕು ಸುಂದರವಾಗುತ್ತದೆ. ಬುದ್ಧರ ಸಂದೇಶ ಪಾಲಿಸುವುದು ತುಂಬಾ ಅಗತ್ಯವಾಗಿದೆ ಎಂದು ನುಡಿದರು.


ಕಾರ್ಯಕ್ರಮದಲ್ಲಿ ಸಮಾಜ ಸೇವಕ ಶಿವಯೋಗೆಪ್ಪ ಎಸ್.ಬಿರಾದಾರ, ತೋಟಗಾ–ರಿಕೆ ನಿರಿಕ್ಷಕಿ ಅಶ್ವಿನಿ ಚಿಂಚೋಳಿಕರ್, ವಿಕ್ರಮ್, ಉದಯ ವಂಟಿ, ಅಂಬುಬಾಯಿ, ಸುಮಿತ್ರಾಬಾಯಿ, ಲಕ್ಷ್ಮೀಬಾಯಿ, ಮಮತಾ,ಸುನಿತಾ, ಶೈಲಾ, ಶೋಭಾ,–ಅಂಬಿಕಾ, ಕಸ್ತೂರಿಬಾಯಿ, ನಿರ್ಮಲಾ, ರೇಶ್ಮಾ, ಅಂಬಿಕಾ, ಯಲ್ಲಮ್ಮ,ಲಾಲಬಿ, ಮಂಜುಳಾ, ಅಸ್ಮಾ ಬೇಗಂ, ಮೋನಮ್ಮ, ರಂಜಿತಾ, ಚೇತನ್, ಜಗದೇವಿ, ತಬಸ್ಸುಮ್, ಕಲ್ಯಾಣಿ,ಸುರೇಶ್, ವಿಶಾಲ್, ಕೈಲಾಸ ಸೇ–ರಿದಂತೆ ಇನ್ನಿತರರು ಇದ್ದರು.

# ಶಿವಯೋಗಿನಿ ಸಜ್ಜಲ ಗುಡ್ಡದ ಶರಣಮ್ಮ

■ ಉದಯರಶ್ಮಿ ದಿನಪತ್ರಿಕೆ

12ನೇ ಶತಮಾನದ ಮಹಾನ್ ಸಮಾಜ ಸುಧಾರಕ ಬಸವಣ್ಣನವರು ಸಾರಿದ ಬಸವ ತತ್ವವು ಮಾನವೀಯತೆ, ಸಮಾನತೆ ಮತ್ತು ಕಾಯಕ ನಿಷ್ಠೆಯ ಮೇಲೆ ನಿಂತಿದೆ. ಇದು ಕೇವಲ ಒಂದು ಧರ್ಮಕ್ಕೆ ಸೀಮಿತವಾಗದೆ, ಇಡೀ ಮನುಕುಲಕ್ಕೆ ಅನ್ವಯಿಸುವ ಜೀವನ ಮಾರ್ಗವಾಗಿದೆ. ಇಂತಹ ಅಪೂರ್ವವಾದ ಸಮಾನತೆಯ ಆಂದೋಲನವನ್ನು ಮುಂದಿನ ಜನಾಂಗಕ್ಕೆ ಒಯ್ದ ಕೆಲವೇ ಕೆಲವು ಶಿವಯೋಗ ಸಾಧಕರಲ್ಲಿ ಸಜ್ಜಲ ಗುಡ್ಡದ ಶರಣಮ್ಮ.

ಸಜ್ಜಲಗುಡ್ಡದ ಶರಣಮ್ಮನವರು (ಕ್ರಿ.ಶ. 1878–1981) ಉತ್ತರ ಕರ್ನಾಟಕದ ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ಸಜ್ಜಲಗುಡ್ಡದಲ್ಲಿ ನೆಲೆಸಿದ್ದ ಒಬ್ಬ ಶ್ರೇಷ್ಠ ಶಿವಶರಣೆ ಮತ್ತು ಮಹಿಳಾ ಸಂತರು. ಇವರನ್ನು ಭಕ್ತರು ಶ್ರದ್ಧಾಭಕ್ತಿಯಿಂದ "ಸಜ್ಜಲಶ್ರೀ ಶರಣಮ್ಮ ತಾಯಿ" ಎಂದು ಕರೆಯುತ್ತಾರೆ.



**ಜೀವನದ ಹಿನ್ನೆಲೆ**

ಜನ್ಮ: ಇವರು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಮುದೇನೂರು ಗ್ರಾಮದಲ್ಲಿ ಲಿಂಗಣ್ಣ ಮತ್ತು ಲಿಂಗಮ್ಮ ಹಾಲುಮತದ ದಂಪತಿಗಳ ಮಗಳಾಗಿ ಜನಿಸಿದರು.

ಮೂಲ ಹೆಸರು: ಇವರ ಬಾಲ್ಯದ ಹೆಸರು ಯಮುನಮ್ಮ.

ವೈರಾಗ್ಯ: ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು, ಬಡತನ ಮತ್ತು ಬರಗಾಲದ ಕಷ್ಟಗಳನ್ನು ಅನುಭವಿಸಿ ಲೌಕಿಕ ಜೀವನದ ಮೇಲೆ ವೈರಾಗ್ಯ ತಳೆದರು.

ದೀಕ್ಷೆ: ಗುಡದೂರಿನ ದೊಡ್ಡಬಸವಾರ್ಯ ಶರಣರಿಂದ ಲಿಂಗದೀಕ್ಷೆ ಪಡೆದು, ಬಳ್ಳಾರಿಯ ಸಕ್ಕರಿ ಕರಡೆಪ್ಪನವರು ಸ್ಥಾಪಿಸಿದ ಶ್ರೀ ಗುರು ಬಸವ ಶಾಲೆಯಲ್ಲಿ ಬಸವ ತತ್ವದ ಶಿಕ್ಷಣವನ್ನು ಪಡೆದು

ಮುಂದೆ ಸಜ್ಜಲಗುಡ್ಡದಲ್ಲಿ ನೆಲೆಸಿ ಕಠಿಣ ತಪಸ್ಸು ಮತ್ತು ಶಿವಯೋಗವನ್ನು ಆಚರಿಸಿದರು.

**ಸಮಾಜ ಸೇವೆ ಮತ್ತು ಆಧ್ಯಾತ್ಮ**

ಬಸವ ತತ್ವ: 12ನೇ ಶತಮಾನದ ಬಸವಾದಿ ಶರಣರ ತತ್ವಗಳಾದ ಕಾಯಕ ಮತ್ತು ದಾಸೋಹವನ್ನು ಪಾಲಿಸಿ ಜನರಲ್ಲಿ ಆಧ್ಯಾತ್ಮಿಕ ಜಾಗೃತಿ ಮೂಡಿಸಿದರು.

ಸಮಾನತೆ: ಜಾತಿ, ಮತ, ಪಂಥಗಳ ಬೇಧವಿಲ್ಲದೆ ದೀನ–ದಲಿತರ ಕಲ್ಯಾಣಕ್ಕಾಗಿ ಶ್ರಮಿಸಿದರು.

ಬಾಲ್ಯ ಮತ್ತು ಆಧ್ಯಾತ್ಮಿಕ ಪಯಣ

ಬಾಲ್ಯದ ಕಷ್ಟಗಳು: 1878ರ ಸುಮಾರಿಗೆ ಜನಿಸಿದ ಯಮುನಮ್ಮನವರು (ಶರಣಮ್ಮ) ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡರು. ಕುಟುಂಬವು ತೀವ್ರ ಬಡತನ ಮತ್ತು ಬರಗಾಲವನ್ನು ಎದುರಿಸಿದಾಗ, ಅವರು ಬಳ್ಳಾರಿ ಜಿಲ್ಲೆಯ ಕಂಪ್ಲಿಗೆ ಕೆಲಸಕ್ಕಾಗಿ ವಲಸೆ ಹೋಗಬೇಕಾಯಿತು.

**ವಚನಗಳ ಪ್ರಭಾವ**

ಇವರು ಮೂರು ವರ್ಷಗಳ ಕಾಲ ಅತ್ಯಂತ ನಿಷ್ಠೆಯಿಂದ ವಚನಗಳನ್ನು ಅಧ್ಯಯನ ಮಾಡಿದ್ದರು. ಸಮಗ್ರ ವಚನ ಸಂಪುಟವೇ ಅವರ ಮನದಲ್ಲಿತ್ತು ಮತ್ತು ಅವರ ಪ್ರತಿಯೊಂದು ಮಾತಿನಲ್ಲೂ ವಚನಗಳೇ ಇರುತ್ತಿದ್ದವು.

ಗುರುಗಳು: ಗುಡದೂರು ಗ್ರಾಮದ ಶ್ರೀ ದೊಡ್ಡಬಸವಾರ್ಯ ಶರಣರು ಇವರ ಆಧ್ಯಾತ್ಮಿಕ ಗುರುಗಳು. ಅವರಿಂದ ಲಿಂಗದೀಕ್ಷೆ ಪಡೆದ ನಂತರ ಇವರು ಶಿವಯೋಗಿನಿಯಾದರು.

**ಸಮಾಜ ಸೇವೆ ಮತ್ತು ಶಿಕ್ಷಣಕ್ಕೆ ಕೊಡುಗೆ**

ಕೇವಲ ಆಧ್ಯಾತ್ಮಕ್ಕೆ ಸೀಮಿತವಾಗದೆ, ಶರಣಮ್ಮನವರು ಸಮಾಜದ ಏಳಿಗೆಗಾಗಿ ಶ್ರಮಿಸಿದರು:

**ಶಿಕ್ಷಣ ಸಂಸ್ಥೆಗಳು**

ಮಠದ ಮೂಲಕ ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗಾಗಿ ಅನೇಕ ಶಾಲೆ ಮತ್ತು ಕಾಲೇಜುಗಳನ್ನು ಸ್ಥಾಪಿಸಿದ್ದಾರೆ. ವಿಜಯಪುರ, ಬಾಗಲಕೋಟೆ ಜಿಲ್ಲೆಯ ಕಂಬಳಿಹಾಳ, ಮತ್ತು ಕಂದಗಲ್ ಗ್ರಾಮಗಳಲ್ಲಿ ಇವರ ಹೆಸರಿನಲ್ಲಿ ಶಿಕ್ಷಣ ಸಂಸ್ಥೆಗಳು ಇಂದಿಗೂ ಜ್ಞಾನದಾಸೋಹ ಮಾಡುತ್ತಿವೆ.



### ಸಾವಿಲ್ಲದ ಶರಣರು

ದಾಸೋಹ ಪರಂಪರೆ

ಸಜ್ಜಲಗುಡ್ಡದ ಮಠವು ಆಧ್ಯಾತ್ಮಿಕ ಚಿಂತನೆ ಮಾತ್ರವಲ್ಲದೆ, ಸಂಸ್ಕೃತ, ವಚನ ಪಾಠಗಳ ಉಚಿತ ಬೋಧನೆ ಮತ್ತು ಉಚಿತ ಅನ್ನದಾಸೋಹಕ್ಕೆ ಹೆಸರಾಗಿದೆ.

ಅಧ್ಯಯನ ಪೀಠ

ಶರಣಮ್ಮ ತಾಯಿಯವರ ಹೆಸರಿನಲ್ಲಿ ಕೊಪ್ಪಳ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಪೀಠ ಸ್ಥಾಪಿಸಬೇಕೆಂಬ ಮನವಿಯನ್ನು ಶ್ರೀಮಠದ ಹಳೆಯ ವಿದ್ಯಾರ್ಥಿಗಳ ಒಕ್ಕೂಟವು ಸಲ್ಲಿಸಿದೆ.

**ಲಿಂಗೈಕ್ಯ**

ಇವರು 102 ವರ್ಷಗಳ ಕಾಲ ಸಾರ್ಥಕ ಜೀವನ ನಡೆಸಿ, 1981ರ ಏಪ್ರಿಲ್ 24ರಂದು ಸಜ್ಜಲಗುಡ್ಡದಲ್ಲೇ ಲಿಂಗೈಕ್ಯರಾದರು.

ಜಾತ್ರೆ: ಪ್ರತಿ ವರ್ಷ ಏಪ್ರಿಲ್ ತಿಂಗಳಿನಲ್ಲಿ ಶರಣಮ್ಮ



ತಾಯಿಯವರ ದೊಡ್ಡ ಮಟ್ಟದ ಜಾತ್ರೆ ಮತ್ತು ರಥೋತ್ಸವ ಜರುಗುತ್ತದೆ.

**ಸಜ್ಜಲಗುಡ್ಡ ಮಠ**


ಇವರು ಸ್ಥಾಪಿಸಿದ ಸಜ್ಜಲಗುಡ್ಡದ ಮಠವು ಇಂದಿಗೂ ಶಿಕ್ಷಣ, ಉಚಿತ ಅನ್ನದಾಸೋಹ ಮತ್ತು ಆಧ–್ಯಾತ್ಮಿಕ ಚಿಂತನೆಯ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ.

ಆರಾಧನೆ ಮತ್ತು ಮಹಿಮೆ

ಶರಣಮ್ಮನವರು ಅನೇಕ ಪವಾಡಗಳನ್ನು ಮಾಡಿದ್ದಾರೆಂಬ ನಂಬಿಕೆ ಭಕ್ತರಲ್ಲಿದೆ. ಇವರನ್ನು ಈ ಭಾಗದ ಆರಾಧ್ಯ ದೈವವೆಂದು ಪರಿಗಣಿಸಲಾಗುತ್ತದೆ.

ನಡೆದಾಡುವ ದೈವಿ ಶಕ್ತಿ ಎಂದು ಜನರ ಭಾವನೆ. ಕರ್ಮಠಗಳನ್ನು ಕಳೆದು ಸ್ವಚ್ಛ ಸುಂದರ ಬಸವ ತತ್ವ ಪ್ರಸಾರ ಮಾಡಿದ ಅಧಿದೇವತೆ ಸಜ್ಜಲ ಗುಡ್ಡದ ಶರಣಮ್ಮ.

ಲೇಖನ.
■ ಡಾ ಶಶಿಕಾಂತ ಪಟ್ಟಣ
ರಾಮದುರ್ಗ – ಪುಣೆ



# ಗ್ರಾಮೀಣ ಜನತೆ ಕಾನೂನಿನ ಜ್ಞಾನ ಹೊಂದಬೇಕು : ನ್ಯಾ. ನಾಗೇಶ



■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ; ಗ್ರಾಮೀಣ ಜನತೆ ಕಾನೂನಿನ ಜ್ಞಾನ ಹಾಗೂ ಅರಿವು ಹೊಂದುವುದು ಇಂದು ಅಗತ್ಯವಾಗಿದೆ ಎಂದು ಹಿರಿಯ ನ್ಯಾಯಾಧೀಶ ನಾಗೇಶ ಮೋಗೇರ್ ಹೇಳಿದರು.

ತಾಲ್ಲೂಕಿನ ಚಿಕ್ಕರೂಗಿ ಗ್ರಾಮದಲ್ಲಿ ಸಿಂದಗಿ ತಾಲ್ಲೂಕು ವಕೀಲರ ಸಂಘದಡಿ ಗುರುವಾರ ಜರುಗಿದ ಕಾನೂನು ಅರಿವು, ನೆರವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡಿಸಬೇಕು. ಅಪರಾಧ ಚಟುವಟಿಕೆಗಳಿಂದ ದೂರವಿರಬೇಕು. ಇಂದು ವರದಕ್ಷಿಣೆ ನೀಡುವುದು ಹಾಗೂ ತೆಗೆದುಕೊಳ್ಳುವುದು ಎರಡು ಅಪರಾಧಗಳೆನ್ನಿಸಿವೆ.

ಆದ್ದರಿಂದ ಗ್ರಾಮವನ್ನು ವರದಕ್ಷಿಣೆಮುಕ್ತವಾಗಿಸಲು ತಾವೆಲ್ಲರೂ ಮುಂದಾಗಬೇಕು ಎಂದು ಸಲಹೆ ನೀಡಿದರು

ನ್ಯಾಯಾಧೀಶೆ ಪಂಕಜಾ ಕೊಣ್ಣೂರ ಮಾತನಾಡಿ, ಚಿಕ್ಕ ಮಕ್ಕಳಿಗೆ ವಾಹನ ಚಾಲನೆ ಮಾಡಲು ಕೊಡಬೇಡಿ. ಒಂದು ವೇಳೆ ನೀಡಿದರೆ ಅದಕ್ಕೆ ನ್ಯಾಯಾಲಯದಿಂದ ದಂಡ ವಿಧಿಸಲಾಗುತ್ತದೆ. ಮತ್ತು ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಬೇಡಿ ಎಂದು ಕಾನೂನಾತ್ಮಕ ವಿಚಾರಗಳನ್ನು ತಿಳಿಸಿದರು.

ಸಿಂದಗಿ ವಕೀಲರ ಸಂಘದ ಅಧ್ಯಕ್ಷ ಎಸ್.ಬಿ.ಪಾಟೀಲ ಹಾಗೂ ಸರ್ಕಾರಿ ವಕೀಲ ಬಿ.ಜಿ.ನೆಲ್ಲಗಿ ಮಾತನಾಡಿ, ವರದಕ್ಷಿಣೆ ಮತ್ತು ಭೂಮಿಯ ಸಂರಕ್ಷಣೆ ಬಗ್ಗೆ ವಿಚಾರಗಳನ್ನು ತಿಳಿಹೇಳಿದರು.

ವಕೀಲ ಶ್ರೀಶೈಲ ಮುಳಜಿ (ಚಿಕ್ಕರೂಗಿ) ಮಾತನಾಡಿ, ನಮ್ಮ ಯುವಕರು ಕಾನೂನನ್ನು ಗೌರವಿಸಬೇಕು ಹಾಗೂ ಪಾಲಿಸಬೇಕು. ಕಾನೂನಿನ ವಿರುದ್ಧ ಯಾವುದೇ ಚಟುವಟಿಕೆ ಮಾಡಿದರೆ ಅದರ ಪರಿಣಾಮ ನಾವೇ ಎದುರಿಸಬೇಕಾಗುತ್ತದೆ ಎಂದರು.

ವಕೀಲರುಗಳಾದ ಕಾಶೀನಾಥ ಚವ್ಹಾಣ, ರವಿ ನಾಯಕ, ಬಿ.ಎಸ್.ಬಿರಾದಾರ, ಪಿಕೆಪಿಎಸ್ ಅಧ್ಯಕ್ಷ ನಾಗಣ್ಣ ಮುಳಜಿ, ಪಿಡಿಓ ಶಿವಾನಂದ ಮುಲಿಮನಿ, ಎಸ್.ಎಮ್.ಆನಂದಿ, ವಿಶ್ವನಾಥ್ ಚಂಡಕಿ ಶಂಕರಗೌಡ ಪಾಟೀಲ, ಮಲ್ಲಿಕಾರ್ಜುನ ಚಂಡಕಿ, ದೇವಾನಂದ ಬಾಗಲಕೋಟ, ಕುಮಾರಗೌಡ ಬಿರಾದಾರ, ಚಿದಾನಂದ ಬಿರಾದಾರ, ಕಲ್ಲು ನಾಟೀಕಾರ, ಶರಣಪ್ಪ ಕುಂಬಾರ, ಬಸವರಾಜ ಕುಂಬಾರ ಇದ್ದರು.

# ನಿಷ್ಕಳಂಕ ಸೇವೆ ಸಲ್ಲಿಸುವುದು ಇತರರಿಗೆ ಮಾದರಿ : ಮಹಾಂತೇಶ




■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಇಲಾಖೆಯಲ್ಲಿ ಸೇವಾತತ್ಪರತೆಯ ಮೂಲಕ ನಿಷ್ಕಳಂಕ ಸೇವೆ ಸಲ್ಲಿಸುವುದು ಇತರರಿಗೆ ಮಾದರಿಯಾಗಿದೆ ಎಂದು ಜಿಲ್ಲಾ ಅಂಚೆ ಅಧಿಕ್ಷಕ ಮಹಾಂತೇಶ ತೊಗರಿ ಹೇಳಿದರು.

ಪಟ್ಟಣದ ಅಂಚೆ ಕಚೇರಿಯಲ್ಲಿ ಗುರುವಾರ ಸೇವಾನಿವೃತ್ತರಾದ ಡಾಕ್‌ಸೇವಕ ವೆಂಕಟೇಶ ಕುಲಕರ್ಣಿ ಅವರ ಬೀಳ್ಕೊಡುವ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪಟ್ಟಣದಲ್ಲಿ ತಮ್ಮ ಸತತ 35 ವರ್ಷಗಳ ಕಾಲ ನಿಷ್ಕಳಂಕ ಸೇವೆಯ ಮೂಲಕ ಮನೆಮಾತಾಗಿರುವ ವೆಂಕಟೇಶ ಕುಲಕರ್ಣಿ ಅವರ ನಿವೃತ್ತಿ ಜೀವನ ಸುಖಮಯವಾಗಿರಲಿ ಎಂದರು.

ಸನ್ಮಾನಿತರ ಪರ ಸುಪ್ರೀಯಾ ಕುಲಕರ್ಣಿ ಮಾತನಾಡಿ, ತಂದೆಯ ಸೇವೆಯ ಸಾರ್ಥಕತೆಗೆ ಇಲಾಖೆ ಪರವಾಗಿ ಸಂದ ಗೌರವಕ್ಕೆ ಅಭಿನಂದನೆ ಸಲ್ಲಿಸಿದರು.

ಅಂಚೆ ನಿರೀಕ್ಷಕ ಕರಣ ಎಂ.ಜಿ. ಶಾರದಾ ಹೆಡಜೋಳ, ಮನೋಹರ ಪೋಳ, ಅಮರೇಶ ಕಲಶೆಟ್ಟಿ, ಬಸಯ್ಯ ಸ್ಥಾವರಮಠ, ಭಾಗ್ಯ ಪುರವಂತರಮಠ, ಕೀರ್ತಿ ಪಾಟೀಲ, ಸುವರ್ಣ ಕಲಾಲ್, ಸುನಂದಾ ಬಿರಾದಾರ, ಪ್ರವೀಣ ಕುಲಕರ್ಣಿ, ಬಿ.ಟಿ.ಮಾದರ, ರಾಮನಗೌಡ ಬಿರಾದಾರ ಇದ್ದರು.

## ಸಿಐಐಎಲ್ ನಿರ್ದೇಶಕರಾಗಿ ಪ್ರೊ.ಬಸವರಾಜ ಕೊಡಗುಂಟಿ ಆಯ್ಕೆ

ಕಲಬುರಗಿ: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಹಾಗೂ ಮುಖ್ಯ ಜಾಗ್ರತಾಧಿಕಾರಿ ಪ್ರೊ.ಬಸವರಾಜ ಕೊಡಗುಂಟಿ ಅವರು ಮೈಸೂರಿನ ಭಾರತೀಯ ಭಾಷೆಗಳ ಸಂಸ್ಥಾನದ ( ಸಿಐಐಎಲ್) ದ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಈ ಕುರಿತು ಕೇಂದ್ರ ಸರಕಾರದ ಶಿಕ್ಷಣ ಇಲಾಖೆಯ ಉಪಕಾರ್ಯದರ್ಶಿ ಸಿಯುಕೆ ಕುಲಪತಿಗಳಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಇವರನ್ನು 6 ತಿಂಗಳು ಅಥ–'ವಾ ಮುಂದಿನ ಖಾಯಂ ನಿರ್ದೇಶಕರ ನೇಮಕಾತಿ ಇವುಗಳಲ್ಲಿ ಯಾವುದು ಮೊದಲೋ ಆವರೆಗೆ ಇವರನ್ನು ನಿರ್ದೇಶಕರಾಗಿ ನೇಮಕ ಮಾಡಲಾಗಿದೆ.

# ಮೌಲ್ಯಮಾಪನ ಎಡವಟ್ಟು ಪಾಸ್ ಆಗಿದ್ದ ವಿದ್ಯಾರ್ಥಿನಿ ಫೇಲ್!

## ಆತಂಕಕೊಳಗಾದ ವಿದ್ಯಾರ್ಥಿನಿಯನ್ನು ಸಮಾಧಾನಪಡಿಸಿದ ಶಿಕ್ಷಕರು

■ ಉದಯರಶ್ಮಿ ದಿನಪತ್ರಿಕೆ



ತಿಕೋಟಾ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಇಂಗ್ಲೀಷ್ ವಿಷಯದಲ್ಲಿ ಕೇವಲ 06 ಅಂಕ ಪಡೆದು ಅನುತ್ತೀರ್ಣಳಾಗಿದ್ದ ತಾಲ್ಲೂಕಿನ ಬಿಜ್ಜರಗಿ ಗ್ರಾಮದ ಮಾಣಿಕೇಶ್ವರಿ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ವಿದ್ಯಾರ್ಥಿನಿ ಶ್ರೇಯಾ ಮಾದೇವ ಚೌಧರಿ ಉತ್ತರ ಪತ್ರಿಕೆಯ ಫೋಟೊ ಪ್ರತಿ ಪಡೆದಾಗ 64 ಅಂಕ ಪಡೆದಿರುವುದು ಬೆಳಕಿಗೆ ಬಂದಿದೆ.

ಫಲಿತಾಂಶದ ನಂತರ ಅನುತ್ತೀರ್ಣಗೊಂಡ ಶ್ರೇಯಾ ಅಳುತ್ತಾ, ಊಟ, ನಿದ್ದೆ ಬಿಟ್ಟು ಚಿಂತೆಗೆ ಒಳಗಾಗಿದ್ದಳು. ಸಂಸ್ಥೆಯ ಅಧ್ಯಕ್ಷ ಚಿದಾನಂದ ಅವಟಿ ಹಾಗೂ ಸಹ ಶಿಕ್ಷಕರು ವಿಧ್ಯಾರ್ಥಿನಿ ಮನೆಗೆ ಭೇಟಿ ನೀಡಿ ಧೈರ್ಯ ತುಂಬಿ ಉಳಿದ ಎಲ್ಲ ವಿಷಯಗಳ ಅಂಕಗಳನ್ನು ಫಲಿತಾಂಶದಲ್ಲಿ ವೀಕ್ಷಿಸಿದರು. ಪ್ರತಿಭಾನ್ವಿತ ವಿಧ್ಯಾರ್ಥಿನಿಯಾದ ಇವಳ ಉಳಿದೆಲ್ಲ ವಿಷಯಗಳ ಅಂಕಗಳು ಹೆಚ್ಚಿಗೆ ಬಂದಿರುವದನ್ನು ಗಮನಿಸಿದ ಅವಟಿಯವರು ಇಂಗ್ಲೀಷ್ ವಿಷಯದಲ್ಲಿ ಅನುತ್ತೀರ್ಣಗೊಳ್ಳಲು ಸಾಧ್ಯವೇ ಇಲ್ಲ ಎಂಬ ನಂಬಿಕೆಯಿಂದ ಉತ್ತರ ಪತ್ರಿಕೆಯ ಫೋಟೊ ಪ್ರತಿಗಾಗಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿಗೆ(ಕೆ–ಎಸ್‌ಇಎಬಿ) ಅರ್ಜಿ ಸಲ್ಲಿಸಿದರು.

ಉತ್ತರ ಪತ್ರಿಕೆ ವಿದ್ಯಾರ್ಥಿಯ ಕೈಸೇರಿದಾಗ ಮೌಲ್ಯಮಾಪಕರ ಎಡವಟ್ಟು ಬೆಳಕಿಗೆ ಬಂದಿದ್ದು, ಅವಳು ಇಂಗ್ಲೀಷ ವಿಷಯದಲ್ಲಿ 64 ಅಂಕ ಗಳಿಸಿದ್ದಾಳೆ.

ನಾನು ಎಲ್ಲ ವಿಷಯ ಸೇರಿ ಶೇ. 80 ಕ್ಕಿಂತ ಹೆಚ್ಚು ಅಂಕ ಪಡೆಯುತ್ತೇನೆ ಎಂಬ ಆತ್ಮವಿಶ್ವಾಸ ಇತ್ತು. ಫಲಿತಾಂಶ ನೋಡಿದ ನಂತರ ನಂಬಲು ಅಸಾಧ್ಯವಾಯಿತು.

ಆದರೂ ಕೂಡಾ ನಾನು ಇಂಗ್ಲೀಷ್ ವಿಷಯದಲ್ಲಿ 60 ಕ್ಕಿಂತ ಹೆಚ್ಚಿನ ಅಂಕ ಬರಬೇಕಿತ್ತು ಎಂದು ಶಿಕ್ಷಕರ ಬಳಿ ತನ್ನ ಅಳಲನ್ನು ತೋಡಿಕೊಂಡಿದ್ದೇನೆಂದು ಶ್ರೇಯಾ ಹೇಳಿದಳು.

# ಅರಣ್ಯ ಕಾರ್ಮಿಕರಿಗೆ ಪಿಎಫ್, ವಿಮೆ ಒದಗಿಸಲು ಕ್ರಮ : ಮಹೇಶ

■ ಉದಯರಶ್ಮಿ ದಿನಪತ್ರಿಕೆ



ಆಲಮಟ್ಟಿ: ಅರಣ್ಯ ಇಲಾಖೆಯ ಕಾರ್ಮಿಕರಿಗೆ ಭವಿಷ್ಯ ನಿಧಿ, ವೈದ್ಯಕೀಯ ವಿಮೆ ಸೇರಿದಂತೆ ನಾನಾ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ವಲಯ ಅರಣ್ಯಾಧಿಕಾರಿ ಮಹೇಶ ಪಾಟೀಲ ಭರವಸೆ ನೀಡಿದರು.

ಆಲಮಟ್ಟಿಯ ಡ್ಯಾಂ ನರ್ಸರಿಯಲ್ಲಿ ಶುಕ್ರವಾರ ನಡೆದ ಕಾರ್ಮಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

"ನೂರಾರು ಅರಣ್ಯ ದಿನಗೂಲಿ ಕಾರ್ಮಿಕರು ತಮ್ಮ ಜೀವನದ ಬಹುಪಾಲು ಆಲಮಟ್ಟಿಯಲ್ಲಿಯೇ ಕಳೆದಿದ್ದಾರೆ. ಕಾರ್ಖಾನೆ, ಗಣಿ, ವಿದ್ಯುತ್ ಕ್ಷೇತ್ರಗಳಲ್ಲಿ ಕಾರ್ಮಿಕರಿಗೆ ಹೆಚ್ಚಿನ ಅಪಾಯವಿರುತ್ತದೆ. ಆದರೆ ನೀವು ನಿಸರ್ಗದೊಂದಿಗೆ ಕೆಲಸ ಮಾಡುತ್ತಿದ್ದು, ಅಪಾಯ ಕಡಿಮೆ, ಶ್ರಮ ಹೆಚ್ಚು" ಎಂದರು.

ಕಾರ್ಮಿಕ ಮುಖಂಡ ಹಾಗೂ ಅರಣ್ಯ ನೌಕರರ ಸಂಘದ ಜಿಲ್ಲಾಧ್ಯಕ್ಷ ವಿರೂಪಾಕ್ಷಿ ಮಾದರ ಮಾತನಾಡಿ, "1995ಕ್ಕಿಂತ ಮುಂಚೆ ಆಲಮಟ್ಟಿಯಲ್ಲಿ ಗಿಡಗಳು, ಹಸಿರು ಅಪರೂಪವಾಗಿತ್ತು. ಈಗ ಸುಮಾರು 150ಕ್ಕೂ ಹೆಚ್ಚು ವಿವಿಧ ಜಾತಿಯ ಸಾವಿರಾರು ಗಿಡಗಳನ್ನು ಆಲಮಟ್ಟಿಯಲ್ಲಿ ಕಾಣುತ್ತೇವೆ. ವಿಜಯಪುರ ಜಿಲ್ಲೆಯಾದ್ಯಂತ ಹಸಿರೀಕರಣವಾಗಿದೆ. ಇದಕ್ಕೆಲ್ಲಾ ಕಾರಣ ಕಾರ್ಮಿಕರ ಅವಿರತ ಶ್ರಮ" ಎಂದರು.

ಸರ್ಕಾರ ನಿಗದಿಪಡಿಸಿದ ದಿನಕ್ಕೆ 626 ರೂ. ವೇತನ ನೀಡಬೇಕು, ವಾರಕ್ಕೊಮ್ಮೆ ವೇತನ ಸಹಿತ ರಜೆ ಹಾಗೂ ಸರ್ಕಾರಿ ರಜೆ ದಿನಗಳಂದು ವೇತನ ನೀಡಬೇಕು ಎಂದು ಅವರು ಮನವಿ ಮಾಡಿದರು. ಕೆಲಸದ ಅಭಾವದಿಂದ ಕಾರ್ಮಿಕರ ಸಂಖ್ಯೆ 250ಕ್ಕೆ ಇಳಿದಿದೆ ಎಂದು ವಿರೂಪಾಕ್ಷಿ ವಿಷಾದ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸಹಾಯಕ ಅರಣ್ಯಾಧಿಕಾರಿ ರಮೇಶ ಚವ್ಹಾಣ, ಶಿವಾನಂದ ಜಿದ್ದಿಮನಿ, ಡಿವೈಆರ್–ಎಫ್‌ಓ ಸತೀಶ ಗಲಗಲಿ, ಸಂತೋಷ ರಾಠೋಡ, ಅಶೋಕ ಮೇಲಿನಮನಿ, ಸಯ್ಯದ ಖರೋಳಿ, ಕಾರ್ಮಿಕ ಮುಖಂಡರಾದ ಬಸವರಾಜ ಗುಡಿಮನಿ, ಭೀಮಶಿ ಪವಾರ, ಸರೋಜಾ ಲಮಾಣಿ, ಆನಂದ ದುಲಾರಿ, ರುಕ್ಮಾ ಚವ್ಹಾಣ, ಲಕ್ಷ್ಮಣ ಬ್ಯಾಲಾಳ ಮತ್ತಿತರರು ಉಪಸ್ಥಿತರಿದ್ದರು.

# ಬುದ್ದನ ತತ್ವ, ಸಿದ್ಧಾಂತಗಳು ಇಂದಿಗೂ ಪ್ರಸ್ತುತ : ಎಡಿಸಿ ಡಾ. ಔದ್ರಾಮ

## ವಿಜಯಪುರ ಜಿಲ್ಲಾಡಳಿತದಿಂದ ಸಾರಿಪುತ್ರ ಬುದ್ಧ ವಿಹಾರದಲ್ಲಿ ಅದ್ದೂರಿ ಭಗವಾನ ಬುದ್ಧ ಜಯಂತಿ ಆಚರಣೆ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ನಗರದಲ್ಲಿ ಶುಕ್ರವಾರ ಭಗವಾನ್ ಬುದ್ಧ ಜಯಂತ್ಯುತ್ಸವವನ್ನು ಸಡಗರ, ಸಂಭ್ರಮದಿಂದ ಆಚರಿಸಲಾಯಿತು.

ಬುದ್ಧ ಜಯಂತಿ ಅಂಗವಾಗಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಭಗವಾನ್ ಬುದ್ದರ ಭಾವಚಿತ್ರಕ್ಕೆ ಜಿಲ್ಲಾಡಳಿತ ಪುಷ್ಪಾರ್ಚನೆ ನಡೆಯಿತು. ಬಳಿಕ ಡಾ. ಬಿ.ಆರ್. ಅಂಬೇಡ್ಕರ್ ಭವನ ಜಿಲ್ಲಾ ಪಂಚಾಯಿತಿ ಮುಖ್ಯ ದ್ವಾರದಿಂದ ಸಾರಿಪುತ್ರ ಬುದ್ದ ವಿಹಾರದವರೆಗೆ ಭಗವಾನ್ ಬುದ್ಧನ ಭವ್ಯ ಭಾವಚಿತ್ರದ ಮೆರವಣಿಗೆ ಸಕಲ ಕಲಾ ವಾದ್ಯ ಮೇಳದೊಂದಿಗೆ ನಡೆಯಿತು.

ಈ ಭವ್ಯ ಮೆರವಣಿಗೆಯಲ್ಲಿ ಬೌದ್ಧ ಉಪಾಸಕರು, ಉಪಾಸಕಿಯರು ಭಾಗವಹಿಸುವ ಮೂಲಕ ಮೆರವಣಿಗೆಯ ಕಳೆ ಹೆಚ್ಚಿಸಿದ್ದು ವಿಶೇಷವಾಗಿತ್ತು.

ಬಳಿಕ ಸಾರಿ ಪುತ್ರ ಬುದ್ದ ವಿಹಾರದಲ್ಲಿ ಬೌದ್ಧ ಬಿಕ್ಕುಗಳಿಂದ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ಬಳಿಕ ಬುದ್ದ ವಿಹಾರದಲ್ಲಿ ಭಗವಾನ್ ಬುದ್ದ ಜಯಂತ್ಯುತ್ಸವದ ವೇದಿಕೆ ಕಾರ್ಯಕ್ರಮವನ್ನು ಅಪರ ಜಿಲ್ಲಾಧಿಕಾರಿಗಳಾದ ಡಾ. ಔದ್ರಾಮ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಜಗತ್ತಿಗೆ ಕರುಣೆಯ ಸಂದೇಶ ಸಾರಿದ ಭಗವಾನ್ ಬುದ್ಧನ ತತ್ವಗಳು ಹಾಗೂ ಸಂದೇಶಗಳು ಇಂದಿಗೂ ಹಾಗೂ ಎಂದಿಗೂ ಪ್ರಸ್ತುತವಾಗಿದ್ದು, ಸಾರ್ವಜನಿಕರು ಬುದ್ಧನ ತತ್ವಗಳನ್ನು ಅರ್ಥೈಸಿಕೊಂಡು ಉತ್ತಮ ಜೀವನ ನಡೆಸಬೇಕು ಎಂದು ಕರೆ ನೀಡಿದರು.

ಗೌತಮ ಬುದ್ಧರು ಸಾರಿದ ಬೋಧನೆಗಳು ಸಾರ್ವಕಾಲಿಕ ಸತ್ಯವಾಗಿದ್ದು, ಬುದ್ಧ ಧರ್ಮವು ಮಾನವನ ಅನುಭವದ ಆಳವಾದ ತಿಳಿವಳಿಕೆ ಹೊಂದಿದೆ. ಮನುಷ್ಯನ ಮುಕ್ತಿ ಮಾರ್ಗಕ್ಕೆ ಪ್ರಾಯೋಗಿಕ ಮಾರ್ಗವನ್ನು ಕಲ್ಪಿಸುತ್ತದೆ ಎಂದರು.

ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳು ಆಯೋಗದ ಸದಸ್ಯ ಸುನೀಲ ಉಕ್ಕಲಿ ಮಾತನಾಡಿ, ಅಹಿಂಸೆ ಹಾಗೂ ಕರುಣೆಯ ಸಂದೇಶ ಸಾರಿದ ಗೌತಮ ಬುದ್ಧನ ಉನ್ನತ ತತ್ವ ಸಿದ್ಧಾಂತಗಳಿಂದಾಗಿ ಬೌದ್ಧ ಧರ್ಮ ಇಂದು ಜಗತ್ತಿನಲ್ಲೇ ಮುಂಚೂಣಿಯಲ್ಲಿದೆ. ಹಾಗಾಗಿ ಬೌದ್ಧ ಧರ್ಮ. ಅದೊಂದು ಶಿಕ್ಷಣ ವ್ಯವಸ್ಥೆಯಾಗಿದೆ ಎಂದು ಬೌದ್ಧ ಧರ್ಮದ ಮಹತ್ವವನ್ನು ವಿವರಿಸಿದರು.

ಸಾರಿಪುತ್ರ ಬುದ್ಧ ವಿಹಾರ ನಿರ್ಮಾಣ ಸಮಿತಿ ಅಧ್ಯಕ್ಷ ರಾಜಶೇಖರ ಯಡಹಳ್ಳಿ ಅಧ್ಯಕ್ಷತೆ ವಹಿಸಿ, ಜಗತ್ತಿನಲ್ಲಿ ಬೌದ್ಧ ಧರ್ಮಕ್ಕೆ ಶ್ರೇಷ್ಠತೆ ಕಾಯ್ದುಕೊಂಡಿದೆ. ಹಾಗಾಗಿ ಬುದ್ಧನ ಹೆಸರಿನಲ್ಲಿ ಪ್ರಪಂಚಾದ್ಯಂತ ಸಾಕಷ್ಟು ಕಾರ್ಯಕ್ರಮಗಳು ನಡೆಯುತ್ತಿವೆ. ವಿಜಯಪುರದ ಬುದ್ಧ ವಿಹಾರದಲ್ಲಿ ಪ್ರತಿ ಭಾನುವಾರ ಪ್ರಾರ್ಥನೆ, ಆರಾಧನೆ ಮತ್ತಿತರೆ ಕಾರ್ಯಕ್ರಮಗಳು ನಡೆಯುತ್ತಿವೆ. ಸಾರ್ವಜನಿಕರು ಇಲ್ಲಿ ನಡೆಯುವ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುವ ಮೂಲಕ ಬುದ್ಧನ ತತ್ವ ಸಿದ್ಧಾಂತಗಳನ್ನು ಅರ್ಥೈಸಿಕೊಳ್ಳಬೇಕು ಎಂದರು.

ತಾಳಿಕೋಟೆಯ ಎಸ್.ಕೆ. ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ.ಸುಜಾತಾ ಚಲವಾದಿ ಬುದ್ದ ಜಯಂತಿ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಶ್ರೀ ಶಾಕಾ ಬಂಥೇಜಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಮುಖಂಡರಾದ ಅಭಿಷೇಕ ಚಕ್ರವರ್ತಿ, ಅನೀಲ ಹೊಸಮನಿ, ನಾಗರಾಜ್ ಲಂಬು, ಅಡಿವೆಪ್ಪ ಸಾಲಗಲ್, ಶ್ರೀನಾಥ ಪೂಜಾರಿ, ಮೋಹನ ಕಟ್ಟಿಮನಿ, ವಿದ್ಯಾವತಿ ಅಂಕಲಗಿ, ಪ್ರಭುಗೌಡ ಬಿರಾದಾರ ಸೇರಿದಂತೆ ಬೌದ್ದ ಉಪಾಸಕರು, ಉಪಾಸಕಿಯರು ಪಾಲ್ಗೊಂಡಿದ್ದರು.

# ವರದಕ್ಷಿಣೆ ನೀಡುವುದು ಮತ್ತು ಪಡೆಯುವುದು ಕಾನೂನುಬಾಹಿರ

## ತಾಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರು ಹಾಗೂ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಸಚಿನ್ ಕೌಶಿಕ್ ಎಚ್ಚರಿಕೆ

■ ಉದಯರಶ್ಮಿ ದಿನಪತ್ರಿಕೆ



ಮುದ್ದೇಬಿಹಾಳ: ವರದಕ್ಷಿಣೆ ನೀಡುವುದು ಮತ್ತು ಪಡೆಯುವುದು ಎರಡೂ ಕಾನೂನುಬಾಹಿರವಾಗಿದ್ದು, ಇಂತಹ ಪ್ರಕರಣಗಳು ಕಂಡುಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆ ಯಾವುದೇ ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು ಎಂದು ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರು ಹಾಗೂ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಸಚಿನ್ ಕೌಶಿಕ್ ಅವರು ಹೇಳಿದರು.

ಪಟ್ಟಣದ ನ್ಯಾಯಾಲಯಗಳ ಸಂಕೀರ್ಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ನ್ಯಾಯವಾದಿಗಳ ಸಂಘ, ಶಿಶು ಅಭಿವೃದ್ಧಿ ಇಲಾಖೆ ಹಾಗೂ ಇತರ ಎಲ್ಲ ಸರ್ಕಾರಿ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ವರದಕ್ಷಿಣೆ ನಿಷೇಧ ಕಾಯ್ದೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವರದಕ್ಷಿಣೆ ಎಂಬುದು ಒಂದು ಸಾಮಾಜಿಕ ಪಿಡುಗಾಗಿದ್ದು, ಇದು ಸಮಾಜವನ್ನು ಹಾಳು ಮಾಡುತ್ತಿದೆ. ಈ ಪಿಡುಗನ್ನು ಬುಡಸಮೇತ ನಿರ್ಮೂಲನೆ ಮಾಡಲು ವರದಕ್ಷಿಣೆ ನಿಷೇಧ ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಕಾಯ್ದೆ ಜಾರಿಯಾಗಿ ಸಾಕಷ್ಟು ವರ್ಷಗಳಾದರೂ ಸಹ ವರದಕ್ಷಿಣೆ ಪ್ರಕರಣಗಳು ಇನ್ನೂ ಬೆಳಕಿಗೆ ಬರುತ್ತಿರುವುದು ವಿಷಾದನೀಯ. ಇಂತಹ ಪರಿಸ್ಥಿತಿಯಲ್ಲಿ ಅಧಿಕಾರಿಗಳು ಕಾನೂನುಬಾಹಿರ ಚಟುವಟಿಕೆ ನಡೆಸುವವರ ವಿರುದ್ಧ ತಕ್ಷಣ ಕ್ರಮ ಕೈಗೊಂಡು ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವ ಮೂಲಕ ಕಾನೂನಿನ ಬಲವನ್ನು ಹೆಚ್ಚಿಸಿದಲ್ಲಿ ಮಾತ್ರ ವರದಕ್ಷಿಣೆ ಪ್ರಕರಣಗಳನ್ನ ತಡೆಗಟ್ಟಬಹುದು ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಸಂಯೋಜಕಿ ಭಾರತಿ ಪಾಟೀಲ ಮಾತನಾಡಿ, ವರದಕ್ಷಿಣೆಗಾಗಿ ಹೆಣ್ಣಿನ ಮೇಲೆ ನಿರಂತರ ಶೋಷಣೆ ನಡೆಯುತ್ತಲೇ ಬಂದಿದೆ. ಎಷ್ಟೋ ಹೆಣ್ಣುಮಕ್ಕಳನ್ನ ಸುಟ್ಟ ಉದಾಹರಣೆಗಳು ಇವೆ. ಇಷ್ಟಾದರೂ ಸಮಾಜ ಎಚ್ಚೆತ್ತುಕೊಳ್ಳದಿರುವದು ಬೇಸರದ ಸಂಗತಿ. ಯುವ ಪೀಳಿಗೆ ವರದಕ್ಷಿಣೆ ನಿಷೇಧ ಕಾಯ್ದೆಯನ್ನ ಬೆಂಬಲಿಸಬೇಕು ಎಂದರು.

ನ್ಯಾಯವಾದಿಗಳ ಸಂಘದ ಅಧ್ಯಕ್ಷ ಶಶಿಕಾಂತ ಮಾಲಗತ್ತಿ ಮಾತನಾಡಿದರು.

ವಕೀಲೆ ಹಸೀನಾ ಅನಂತಪೂರ ವಿಶೇಶ ಉಪನ್ಯಾಸ ನೀಡಿದರು.

ಹಿರಿಯಸಿವಿಲ್‌ನ್ಯಾಯಾಧೀಶರಾದರವೀಂದ್ರಕುಮಾರ ಕಟ್ಟಿಮನಿ ಅಧ್ಯಕ್ಷತೆ ವಹಿಸಿದ್ದರು. ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯಗಳು ಹಾಗೂ ಸಿವಿಲ್ ನ್ಯಾಯಾಧೀಶರಾದ ರಾಮಮೂರ್ತಿ ಎನ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಿವಮೂರ್ತಿ ಕುಂಬಾರ, ನ್ಯಾಯವಾದಿಗಳ ಸಂಘದ ಪ್ರ.ಕಾರ್ಯದರ್ಶಿ ಪಿ.ಬಿ.ಗೌಡರ, ಕ್ಷೇತ್ರ ದೈಹಿಕ ಶಿಕ್ಷಣ ಪರಿವೀಕ್ಷಕ ಎ.ಜೆ.ದಖನಿ ವೇದಿಕೆ ಮೇಲಿದ್ದರು. ನ್ಯಾಯವಾದಿ ಚೇತನ ಶಿವಶಿಂಪಿ, ತಾಲೂಕು ಕಾನೂನು ಸೇವಾ ಸಮಿತಿಯ ಆಡಳಿತ ಸಹಾಯಕ ಅರವಿಂದ ಕುಂಬಾರ, ದಲಾಯತ್ ಮಹಾಂತೇಶ ಹಚರೆಡ್ಡಿ ಸೇರಿದಂತೆ, ನ್ಯಾಯವಾದಿಗಳು, ನ್ಯಾಯಾಲಯದ ಸಿಬ್ಬಂದಿ ಮತ್ತು ಸಿಡಿಪಿಓ ಕಚೇರಿಯ ಸಿಬ್ಬಂದಿ ಇದ್ದರು. ನ್ಯಾಯವಾದಿ ಎಂ.ಎ.ಲಿಂಗಸೂರ ಕಾರ್ಯಕ್ರಮವನ್ನು ನಿರ್ವಹಿಸಿದರು.

# ಕಲಬುರಗಿ ನಗರಕ್ಕೆ ನೂತನ ಉಪ ಪೊಲೀಸ್ ಆಯುಕ್ತರಾಗಿ ಶಾಲೂ ಐಪಿಎಸ್ ನೇಮಕ



ಕಲಬುರಗಿ: ರಾಜ್ಯ ಸರ್ಕಾರವು ಕಲಬುರಗಿ ನಗರ ಉಪ ಪೊಲೀಸ್ ಆಯುಕ್ತರಾಗಿ ಯುವ ಮಹಿಳಾ ಐಪಿಎಸ್ ಅಧಿಕಾರಿ ಶಾಲೂ ಅವರನ್ನು ನೇಮಕ ಮಾಡಿದೆ. ಕರ್ನಾಟಕ ಕೇಡನ 2021 ಬಾನ ಶಾಲೂ ಅವರು ಹೊಳೆನರಸಿಪುರದಲ್ಲಿ ಸಹಾಯಕ ಪೊಲೀಸ್ ವರಿಷ್ಠಾಧಿಕಾರಿಯಾಗಿ (ಎಎಪಿ) ಸೇವೆ ಸಲ್ಲಿಸಿ, ನಂತರ ಅಪರಾಧ ತನಿಖಾ ಇಲಾಖೆ (ಸಿಐಡಿ) ವಿಶೇಷ ವಿಚಾರಣಾ ವಿಭಾಗದಲ್ಲಿ ಪೊಲೀಸ್ ವರಿಷ್ಠಾಧಿಕಾರಿಯಾಗಿ (ಎಪಿ) ಬಡ್ತಿ ಪಡೆದಿದ್ದರು.

ಮೂಲತಃಉತ್ತರಪ್ರದೇಶದ ಜೌಪುರ ಮೂಲದ ಶಾಲೂ ಅವರು ಕಂಪ್ಯೂಟರ್ ಸೈನಲ್ಲಿ ಬಿ.ಟೆಕ್ ಪದವಿ ಪಡೆದಿದ್ದಾರೆ. ತಮ್ಮ ಕಾರ್ಯಕ್ಷಮತೆ ಮತ್ತು ನಿಷ್ಠೆಯಿಂದ ಗುರುತಿಸಿಕೊಂಡಿರುವ ಅವರು, ಕಲಬುರಗಿ ನಗರದಲ್ಲಿ ಕಾನೂನು ಸುವ್ಯವಸ್ಥೆ ಬಲಪಡಿಸಲು ಹಾಗೂ ಸಾರ್ವಜನಿಕರ ಭದ್ರತೆಗಾಗಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಿದ್ದಾರೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

## ಚಡಚಣದ ಎಸ್.ಬಿ.ಐ. ಬ್ಯಾಂಕ್ ದರೋಡೆ ಪ್ರಕರಣ । ಶನಿವಾರದ ಬ್ಯಾಂಕ್ ವಹಿವಾಟು ಸ್ಥಗಿತ । ಚಿನ್ನ ಅಥವಾ ಹಣ ಈವರೆಗೆ ಮರಳಿ ನೀಡದ್ದಕ್ಕೆ ಸ್ಥಳೀಯರ ಆಕ್ರೋಶ

# ಚಿನ್ನ ಕಳೆದುಕೊಂಡ ಗ್ರಾಹಕರಿಂದ ಬ್ಯಾಂಕ್‌ಗೆ ಮುತ್ತಿಗೆ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಕಳೆದ ವರ್ಷ ಸೆ.16ರಂದು ಇಡಿ ರಾಜ್ಯವನ್ನೇ ಬೆಚ್ಚಿ ಬೀಳಿಸಿದ ಸ್ಥಳೀಯ ಎಸ್.ಬಿ.ಐ ಬ್ಯಾಂಕ್ ದರೋಡೆ ಪ್ರಕರಣ–ಕ್ಕೆ ಸಂಬಂಧಿಸಿದಂತೆ ಬ್ಯಾಂಕನಲ್ಲಿ ಚಿನ್ನ ಅಡವು ಇಟ್ಟ ಗ್ರಾಹಕರಿಗೆ ಬ್ಯಾಂಕ್ ಇದುವರೆಗೆ ಯಾವದೇ ರೀತಿಯ ಚಿನ್ನ ಅಥವಾ ಹಣ ಮರಳಿ ನೀಡದೇ ಇರುವ ಹಿನ್ನಲೆಯಲ್ಲಿ ದಿನಂಪ್ರತಿ ಬ್ಯಾಂಕ್ಗೆ ಅಲೆದಾಟ ನಡೆಸಿ ರೋಷಹೋದ ಗ್ರಾಹಕರು, ಶನಿವಾರ ಬೆಳಗ್ಗೆ 11:30ರ ಸುಮಾರಿಗೆ ಬ್ಯಾಂಕ್ಗೆ ಮುತ್ತಿಗೆ ಹಾಕಿ ಬ್ಯಾಂಕ್ ಬಂದ್ ಮಾಡಿದ ಘಟನೆ ನಡೆದಿದೆ.

ಬೆಳಿಗ್ಗೆ ಬ್ಯಾಂಕ್‌ಗೆ ಬಂದ ಗ್ರಾಹಕ ಆರ್.ಕೆ.ಭೈರಗೊಂಡ ತಾವು ಅಡವು ಇಟ್ಟ ಚಿನ್ನದ ಕುರಿತು ಶಾಖಾ ವ್ಯವಸ್ಥಾಪಕರಿಗೆ ವಿಚಾ–ರಿಸಿದಾಗ ವ್ಯವಸ್ಥಾಪಕ ಸರಿಯಾದ ಮಾಹಿತಿ ನೀಡದ ಕಾರಣ ಅಲ್ಲಿ ಇದ್ದ ಎಲ್ಲ ಗ್ರಾಹಕರು ಬ್ಯಾಂಕ್ ಬಂದ ಮಾಡಿಸಿ, ಬ್ಯಾಂಕ್ ಮುಂದೆ ಪ್ರತಿಭಟನೆ ನಡೆಸಿದರು.

ನಂತರ ಸ್ಥಳಕ್ಕಾಗಮಿಸಿದ ಚಡಚಣ ಪಿ.ಎಸ್.ಐ.ಸೋಮೇಶಗೆಜ್ಜಿ,ಅಪರಾಧವಿಭಾಗ ಪಿ.ಎಸ್.ಐ. ಎನ್.ಜಿ. ಅಪನಾಯಕ ಹಾಗೂ ಸಿಬ್ಬಂದಿ ಗ್ರಾಹಕರನ್ನು ಸಮಾಧಾನಗೊಳಿಸಲು ಎಷ್ಟೇ ಪ್ರಯತ್ನಿಸಿದರೂ ಗ್ರಾಹಕರು ಅವರ ಮಾತಿಗೆ ಕಿವಿಗೊಡದೇ ತಾವು ಅಡವು ಇಟ್ಟ ಚಿನ್ನ ಕಳುವಾಗಿ 7 ತಿಂಗಳು ಕಳೆದರೂ ಇದುವರೆಗೂ ನಮಗೆ ಯಾವುದೇ ರೀತಿಯ ಹಣ ಅಥವಾ ಚಿನ್ನ ಮರಳಿ ದೊರೆತಿಲ್ಲ. ಇಲ್ಲಿಯವರೆಗೆ ಬ್ಯಾಂಕ್ನವರು ಹೇಳಿದ ಹಾಗೆ ನಾವು ಕೇಳಿದ್ದೇವೆ. ಆದರೆ ನಾವು ನಮ್ಮ ಕಷ್ಟ ಕಾಲಕ್ಕೆ ಎಂದು ಚಿನ್ನ ಅಡವು ಇಟ್ಟಿದ್ದೇವೆ. ಆದರೆ, ಬ್ಯಾಂಕ್ನವರು ದರೋಡೆ ಪ್ರಕರಣ ಸಂಬಂಧಿಸಿದ 1 ತಿಂಗಳಲ್ಲಿ ನಿಮಗೆ ನಿಮ್ಮ ಚಿನ್ನ ಅಥವಾ ಅದರ ಮೊತ್ತ ನೀಡುತ್ತೇವೆ ಎಂದು ಹೇಳಿದ್ದರು. ಈಗ ಶುಭ ಕಾರ್ಯಗಳು ನಡೆದಿದ್ದು ನಮಗೆ ಚಿನ್ನದ ಅವಶ್ಯಕತೆ ಇದೆ. ಇವಾಗ ಕೇಳಿದರೆ ಚಿನ್ನದ ನಿವ್ವಳ ತೂಕದ ಮೊತ್ತ ಹಾಗೂ ಅದಕ್ಕೆ 20% ಹೆಚ್ಚಿಗೆ ಹಣ ನೀಡುತ್ತೇವೆ ಎಂದು ಹೇಳುತ್ತಿದ್ದಾರೆ. ಈ ರೀತಿ ಹಣ ನೀಡಿದರೆ ನಮಗೆ ನಷ್ಟ ಉಂಟಾಗುತ್ತದೆ, ಸಧ್ಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ರೂ.1 ಲಕ್ಷ 50 ಸಾವಿರ ಇದೆ. ಬ್ಯಾಂಕ್ನವರು ನಮಗೆ ಸ್ಥೂಲ ತೂಕ ಹಾಗೂ ಇಂದಿನ ಮಾರುಕಟ್ಟೆ ಬೆಲೆ ನೀಡಬೇಕು, ಇಲ್ಲವಾದರೆ ನಾವು ಅಡವು ಇಟ್ಟ ನಮ್ಮ ಚಿನ್ನವನ್ನು ನಮಗೆ ಮರಳಿ ನೀಡಬೇಕು ಎಂದು ಆಗ್ರಹಿಸಿದರು.



ಪ್ರತಿಭಟನೆಯಲ್ಲಿ ಬ್ಯಾಂಕ್ ಗ್ರಾಹಕರಾದ ಕಾಶೀನಾಥ ಪಾಟೀಲ, ಮಲ್ಲು ಮೇಲಮಳ, ಬಸವರಾಜ ಶರಣಗಾರ, ವಾಸೀಮ ಮುಲ್ಲಾ, ಗುರುಲಿಂಗ ದಂಧರಗಿ, ಆದೀಲ ಶೇಖ, ರಾಘವೇಂದ್ರ ಕುಲಕರ್ಣಿ, ಅಮೀನ ಟಪಾಲ ಸೇರಿದಂತೆ 20ಕ್ಕೂ ಹೆಚ್ಚು ಗ್ರಾಹಕರು ಇದ್ದರು.

## ಕಾಲಾವಕಾಶ ಬೇಡಿದ ಬ್ಯಾಂಕ್ ಅಧಿಕಾರಿಗಳು, ಒಪ್ಪದ ಗ್ರಾಹಕರು

ಬ್ಯಾಂಕ್‌ಗೆ ಆಗಮಿಸಿದ ಪ್ರಾದೇಶಿಕ ವ್ಯವಸ್ಥಾಪಕ ವಿಕಾಸ ಭಗೋತ್ರಾ, ವಿಜಯಪುರ ಶಾಖಾ ವ್ಯವಸ್ಥಾಪಕ ಪ್ರಲ್ಹಾದ ದೇಸಾಯಿ, ವೆಂಕಟೇಶ ಅವರುಗಳು ಗ್ರಾಹಕರಿಗೆ ನೀವು ಅಡವು ಇಟ್ಟ ಚಿನ್ನದ ನಿವ್ವಳ ತೂಕದ ಮೊತ್ತ ಹಾಗೂ ಅದಕ್ಕೆ 20% ಹೆಚ್ಚಿಗೆ ಹಣ ನೀಡುತ್ತೇವೆ ಎಂದು ಭರಸವೆ ನೀಡಿ ಅದಕ್ಕೆ ನಮಗೆ 1 ತಿಂಗಳ ಕಾಲಾವಕಾಶ ನೀಡಬೇಕು ಎಂದು ವಿನಂತಿಸಿಕೊಂಡರು. ಆದರೆ ಅವರ ವಿನಂತಿಗೆ ಬಗ್ಗದ ಗ್ರಾಹಕರು ನಾವು ನಿಮಗೆ ಈಗಾಗಲೇ 6 ತಿಂಗಳ ಕಾಲಾವಕಾಶ ನೀಡಿದ್ದೇವೆ ಆದರೆ ನೀವು ಇದುವರೆಗೂ ನಮಗೆ ಸ್ಪಂದಿಸುತ್ತಿಲ್ಲ ಇನ್ನು ಹೆಚ್ಚಿನ ಕಾಲಾವಕಾಶ ನೀಡಲು ನಮ್ಮಿಂದ ಸಾಧ್ಯವಿಲ್ಲ ಎಂದರು. ನಮಗೆ 4 ದಿನದೊಳಗಾಗಿ ನೀವು ಇಂದಿನ ಚಿನ್ನದ ಮಾರುಕಟ್ಟೆಯ ಬೆಲೆ ನೀಡಬೇಕು ಇಲ್ಲವಾದರೆ ನಾವು ಬ್ಯಾಂಕ್ಗೆ ಮುತ್ತಿಗೆ ಹಾಕಿ ಬ್ಯಾಂಕ್ ಬಂದ್ ಮಾಡುತ್ತೇವೆ ಎಂದು ಎಚ್ಚರಿಸಿದರು. ಇದರ ಬಗ್ಗೆ ನಿರ್ಧಾರ ಕೈಗೊಳ್ಳುವುದು ನಮ್ಮ ಕೈಯಲ್ಲಿ ಇಲ್ಲ. ನಾವು ನಮ್ಮ ಮುಖ್ಯ ಕಛೇರಿಯ ಅಧಿಕಾರಿಗಳಿಗೆ ವಿಚಾರಿಸಿ ನಿಮಗೆ ಸೂಕ್ತ ಹಣ ನೀಡಲು ನಮಗೆ ಕಾಲಾವಕಾಶ ಬೇಕು ಎಂದಾಗ ಅದಕ್ಕೆ ನೀವು ಬ್ಯಾಂಕಿನವರು ನಮಗೆ ಲಿಖಿತ ರೂಪದಲ್ಲಿ ನೀಡಿದರೆ ನಾವು ಪ್ರತಿಭಟನೆಯನ್ನು ಹಿಂಪಡೆಯುವುದಾಗಿ ಹೇಳಿದರು.

ಅದಕ್ಕೆ ಬ್ಯಾಂಕ್ ಅಧಿಕಾರಿಗಳು ಒಪ್ಪಿಕೊಂಡು ಲಿಖಿತ ರೂಪದಲ್ಲಿ 20 ದಿನಗಳ ಕಾಲಾವಕಾಶ ಕೇಳಿದ ನಂತರ ಗ್ರಾಹಕರು ತಮ್ಮ ಪ್ರತಿಭಟನೆಯನ್ನು ಹಿಂಪಡೆದರು.

### ಆಕ್ಷೇಪಣೆ ಸಲ್ಲಿಸುವ ಅವಧಿ ಮೇ 8 ರವರೆಗೆ ವಿಸ್ತರಣೆ

## ಪರಿಶೀಲನಾ ಅದಾಲತ್ ಮುಂದೂಡಿಕೆ: ಡಿಸಿ ಡಾ.ಆನಂದ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ರಾಜ್ಯದ ಗ್ರಾಮ ಪಂಚಾಯಿತಿಗಳ ಚುನಾಯಿತ ಸದಸ್ಯ ಸ್ಥಾನಗಳನ್ನು ಪ್ರಕರಣ 5(1) ರಂತೆ ನಿಗದಿಪಡಿಸಿ ದಿನಾಂಕ:18–04–2026 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಹೊರಡಿಸಲಾದ ಕರಡು ಪ್ರಕಟಣೆಗೆ ಸಾರ್ವಜನಿಕರು ಆಕ್ಷೇಪಣೆಯನ್ನು ಸಲ್ಲಿಸುವ ಅವಧಿಯನ್ನು ಮೇ 8ರಂದು ಸಂಜೆ 5:30 ಗಂಟೆಯವರೆಗೆ ವಿಸ್ತರಿಸಲಾಗಿದೆ.

ಜಿಲ್ಲೆಯ ಗ್ರಾಮ ಪಂಚಾಯಿತಿಗಳ ಚುನಾಯಿತ ಸದಸ್ಯರ ಸಂಖ್ಯೆಯ ಕುರಿತಂತೆ, ಸ್ವೀಕರಿಸಿದ ಆಕ್ಷೇಪಣೆ,ಅಹವಾಲುಗಳ ಅದಾಲತ್ ಮೇ 13ರಂದು ಮಧ್ಯಾಹ್ನ 2:30 ರಿಂದ ಸಂಜೆ 5 ರವರೆಗೆ ಬೆಂಗಳೂರಿನ ಬಹುಮಹಡಿಗಳ ಕಟ್ಟಡ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗೇಟ್–ನಂ–2, ಎರಡನೇ ಮಹಡಿಯಲ್ಲಿ ನಡೆಯಲಿದೆ. ಜಿಲ್ಲೆಯ ಸಾರ್ವಜನಿಕರು ಈ ಅದಾಲತ್ ನಲ್ಲಿ ಭಾಗವಹಿಸಬಹುದಾಗಿದೆ. ಆಕ್ಷೇಪಣೆ ಮತ್ತು ಅಹವಾಲುಗಳನ್ನು ಸಲ್ಲಿಸಿದವರು ಅದಾಲತ್ ನಲ್ಲಿ ಭಾಗವಹಿಸಲು ಇಚ್ಛಿಸಿದಲ್ಲಿ, ತಮ್ಮ ಆಧಾರ್, ಗುರುತಿನ ಚೀಟಿ ಅಥವಾ ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಯಾವುದೇ ಗುರುತಿನ ಚೀಟಿಯ ಪ್ರತಿಯೊಂದಿಗೆ ಹಾಜರಾಗಬಹುದಾಗಿದೆ ಎಂದು ಪಂಚಾಯತ್ ರಾಜ್ ಇಲಾಖೆ ಪ್ರಕಟಣೆ ಹೊರಡಿಸಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## ದ್ವಿತೀಯ ಪಿಯುಸಿ ಪರೀಕ್ಷೆ–2 ನಿಷೇಧಾಜ್ಞೆಜಾರಿಗೊಳಿಸಿ ಆದೇಶ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮೇ.13ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ–2 ಅನ್ನು ಜಿಲ್ಲೆಯ 05 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀ. ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾ–ರಿಗಳೂ ಆದ ಜಿಲ್ಲಾಧಿಕಾರಿ ಡಾ.ಆನಂದ.ಕೆ ಅವರು ಆದೇಶ ಹೊರಡಿಸಿದ್ದಾರೆ. ಪರೀಕ್ಷಾ ಕೇಂದ್ರಗಳ 200 ಮೀ.ವ್ಯಾಪ್ತಿಯಲ್ಲಿನ ಝರಾಕ್ಸ ಅಂಗಡಿಗಳು, ಕಂಪ್ಯೂಟರ್ ಸೆಂಟರ್, ಸೈಬರ್ ಕೆಫೆಗಳು, ಕೋಚಿಂಗ್ ಕೇಂದ್ರಗಳು ಬೆಳಿಗ್ಗೆ 8 ಗಂಟೆಯಿಂದ ಪರೀಕ್ಷೆ ಮುಕ್ತಾಯವಾಗುವವರೆಗೆ ತೆರೆಯದಂತೆ ಆದೇಶಿಸಿದೆ. ಪರೀಕ್ಷೆಯಲ್ಲಿ ತೊಡಗಿರುವ ಯಾವುದೇ ಅಧಿಕಾರಿ ಹಾಗೂ ಸಿಬ್ಬಂದಿಗಳು ಮತ್ತು ಇತರರು ಮೊಬೈಲ್ ಫೋನ್ ತರುವುದನ್ನು ಹಾಗೂ ಬಳಸುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

## ಪಂಚಾಯಿತಿ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಯಾದಗಿರಿ:ಮಾಧ್ಯಮಗಳ ಸ್ವತಂತ್ರ ಕಾರ್ಯಚಟುವಟಿಕೆಗಳಿಗೆ ಅಡ್ಡಿಯಾಗುತ್ತಿರುವ ದೋರನಹಳ್ಳಿ ಪಟ್ಟಣ ಪಂಚಾಯಿತಿ ಅಧಿಕಾ–ರಿಗಳ ವಿರುದ್ಧ ಕಾನೂನುಬದ್ಧವಾಗಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್ ಆಗ್ರಹಿಸಿದ್ದಾರೆ.ಈ ಕುರಿತು ಪ್ರಕಟಣೆ ನೀಡಿರುವ ಅವರು,ಶಹಾಪುರ ತಾಲ್ಲೂಕಿನ ದೋರನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಪತ್ರಕರ್ತರು ಸ್ಥಳೀಯ ಸಮಸ್ಯೆಗಳನ್ನು ಬೆಳಕಿಗೆ ತರುವ ಕಾರ್ಯದಲ್ಲಿ ನಿರಂತರ ತೊಡಗಿದ್ದಾರೆ. ಆದರೆ, ಕೆಲ ಅಧಿಕಾ–ರಿಗಳು ಸುದ್ದಿ ಪ್ರಕಟಣೆಗಳನ್ನು ತಡೆಯಲು ಪರೋಕ್ಷ ಒತ್ತಡ ಹೇರುವ ಮೂಲಕ ಪತ್ರಿಕೋದ್ಯಮದ ಸ್ವಾತಂತ್ರಕ್ಕೆ ಧಕ್ಕೆ ಉಂಟುಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಸಾರ್ವಜನಿಕ ಸಮಸ್ಯೆಗಳನ್ನು ಸಮಾಜದ ಮುಂದಿಡುವ ಮೂಲಕ ಸರ್ಕಾರದ ಗಮನ ಸೆಳೆಯುವುದು ಮಾಧ್ಯಮಗಳ ಕರ್ತವ್ಯ. ಆದರೆ, ಈ ಕಾರ್ಯವನ್ನು ಸಹಿಸಿಕೊಳ್ಳದ ಅಧಿಕಾರಿಗಳು ಪತ್ರಕರ್ತರ ಮೇಲೆ ಅನಾವಶ್ಯಕ ದಬ್ಬಾಳಿಕೆ ನಡೆಸುತ್ತಿರುವುದು ಅಸಮಂಜಸ ಎಂದರು.

## ಮದ್ಯದಂಗಡಿ ಆರಂಭಿಸದಿರಲು ಆಗ್ರಹಿಸಿ ಮುಸ್ಲಿಂ ಬಾಂಧವರ ಮನವಿ

■ ಉದಯರಶ್ಮಿ ದಿನಪತ್ರಿಕೆ



ಅಥಣಿ: ಪಟ್ಟಣದ ಅಥಣಿ ಗೋಕಾಕ ರಸ್ತೆಯಲ್ಲಿರುವ ನಿಮ್ರಾ ಮಸೀದಿ ಹಾಗೂ ರಾಜ್ಯ ಹೆದ್ದಾರಿಯ ಪಕ್ಕದಲ್ಲಿ ನೂತನವಾಗಿ ವೈನ್ಸ್ ಮತ್ತು ಬಾರ್ ಆರಂಭಿಸಲು ಸಿದ್ಧತೆ ನಡೆಯುತ್ತಿದ್ದು, ಇದಕ್ಕೆ ಅಂಜುಮನ್ ಸಂಸ್ಥೆ ಹಾಗೂ ಮುಸ್ಲಿಂ ಸಮಾಜದ ಬಾಂಧವರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಯಾವುದೇ ಕಾರಣಕ್ಕೂ ಈ ಪ್ರದೇಶದಲ್ಲಿ ಮದ್ಯ ಮಾರಾಟಕ್ಕೆ ಪರವಾನಗಿ ನೀಡಬಾರದೆಂದು ಆಗ್ರಹಿಸಿ ತಹಸೀಲ್ದಾರ್, ಅಬಕಾರಿ ಇಲಾಖೆ ಹಾಗೂ ಪೊಲೀಸ್ ಠಾಣೆಗೆ ಮನವಿ ಸಲ್ಲಿಸಲಾಯಿತು.

ಮದ್ಯದ ಅಂಗಡಿ ಅಥವಾ ಎಂ.ಎಸ್.ಐ.ಎಲ್ ಸ್ಥಾಪನೆಗೆ ಅಬಕಾರಿ ನಿಯಮಗಳ ಪ್ರಕಾರ ವಸತಿ ಪ್ರದೇಶ, ಧಾರ್ಮಿಕ ಸ್ಥಳ, ಆಸ್ಪತ್ರೆ ಹಾಗೂ ಶಾಲೆಗಳಿಂದ ಕನಿಷ್ಠ 100 ಮೀಟರ್ ದೂರವಿರಬೇಕು. ಅಲ್ಲದೆ, ಸುಪ್ರೀಂ ಕೋರ್ಟ್ ಮಾರ್ಗಸೂಚಿಯಂತೆ ರಾಜ್ಯ ಹೆದ್ದಾರಿಯಿಂದಲೂ ನಿಗದಿತ ದೂರ ಕಾಯ್ದುಕೊಳ್ಳುವುದು ಕಡ್ಡಾಯ. ಆದರೆ, ಈಗ ಉದ್ದೇಶಿತ ಮದ್ಯದ ಅಂಗಡಿಯು ನಿಮ್ರಾ ಮಸೀದಿಯ ತೀರ ಹತ್ತಿರದಲ್ಲಿದ್ದು, ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿದೆ. ಇದರ ಸುತ್ತಮುತ್ತ ದಟ್ಟವಾದ ವಸತಿ ಪ್ರದೇಶ ಹಾಗೂ ಶಾದಿ ಮಹಲ ಇರುವುದರಿಂದ ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ.

ಈ ಭಾಗದಲ್ಲಿ ಮದ್ಯದ ಅಂಗಡಿ ತೆರೆಯುವುದ–ರಿಂದ ವಸತಿ ಪ್ರದೇಶದ ಮಹಿಳೆಯರು, ಮಕ್ಕಳು ಹಾಗೂ ಮಸೀದಿಗೆ ಬರುವ ಭಕ್ತಾದಿಗಳಿಗೆ ಸಂಚಾರ ಮಾಡಲು ಮತ್ತು ಶಾಂತಿಯುತವಾಗಿ ಬದುಕಲು ತೊಂದರೆಯಾಗುತ್ತದೆ. ಮದ್ಯಪಾನಿಗಳ ಹಾವಳಿಯಿಂದ ಸಾರ್ವಜನಿಕ ಶಾಂತಿಗೆ ಧಕ್ಕೆಯಾಗುವ ಸಾಧ್ಯತೆ ಇದೆ," ಎಂದು ಪ್ರತಿಭಟನಾಕಾರರು ಆಕ್ರೋಶ ಹೊರಹಾಕಿದರು.

ಸಾರ್ವಜನಿಕ ಹಿತದೃಷ್ಟಿಯಿಂದ ಈ ಕೂಡಲೇ ಪರವಾನಗಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಿ ನಿಮ್ರಾ ಮಸೀದಿ ಆವರಣದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಸಮಾಜದ ಬಾಂಧವರು ಸೇರಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಿದರು.

ಬಳಿಕ ತಹಸೀಲ್ದಾರ್, ಅಬಕಾರಿ ಅಧಿಕಾರಿಗಳು ಹಾಗೂ ಪೊಲೀಸ್ ನಿರೀಕ್ಷಕರಿಗೆ ಮನವಿ ಪತ್ರ ಸಲ್ಲಿಸಿ, ಕೂಡಲೇ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಮುಸ್ಲಿಮ ಧರ್ಮ ಗುರು ಮೌಲಾನಾ ಅಬ್ಬಾಸ್ ಅವರು ಪ್ರತಿಯೊಂದು ಧರ್ಮದಲ್ಲೂ ಆಯಾ ಧರ್ಮದ ಪವಿತ್ರ ಕೇಂದ್ರಗಳಿಗೆ ಅತ್ಯುನ್ನತ ಸ್ಥಾನವಿದೆ. ಮುಸ್ಲಿಮರಿಗೆ ಮಸೀದಿ, ಹಿಂದೂಗಳಿಗೆ ಮಂದಿರ ಸೇ–ರಿದಂತೆ ಎಲ್ಲಾ ಧರ್ಮದವರಿಗೂ ಅವರದ್ದೇ ಆದ ಶ್ರದ್ಧಾ ಕೇಂದ್ರಗಳಿವೆ. ಇಂತಹ ಪವಿತ್ರ ಸ್ಥಳಗಳ ಆಸುಪಾಸಿನಲ್ಲಿ ಮದ್ಯದ ಅಂಗಡಿ ಅಥವಾ ಬಾರ್‌ಗಳು ಇರುವುದನ್ನು ಯಾವುದೇ ಧರ್ಮದ ಜನರು ಇಷ್ಟಪಡುವುದಿಲ್ಲ. ಇದು ಸಮಾಜದ ಶಾಂತಿ ಮತ್ತು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ವಿಷಯವಾಗಿದೆ.

ನಮ್ಮ ತಾಲೂಕು ಇದುವರೆಗೂ ಭಾವೈಕ್ಯತೆ ಮತ್ತು ಸೌಹಾರ್ದತೆಗೆ ಹೆಸರುವಾಸಿಯಾಗಿದೆ. ವಿವಿಧ ಧರ್ಮದ ಜನರು ಪರಸ್ಪರ ಪ್ರೀತಿ ಮತ್ತು ಒಗ್ಗಟ್ಟಿನಿಂದ ಬದುಕುತ್ತಿದ್ದೇವೆ. ಈ ಸೌಹಾರ್ದತೆಯು ಮುಂದೆಯೂ ಹೀಗೆಯೇ ಮುಂದುವರಿಯಬೇಕೆಂದು ನಾವು ಆಶಿಸುತ್ತೇವೆ.

ಆದ್ದರಿಂದ, ಸಾರ್ವಜನಿಕರ ಹಿತದೃಷ್ಟಿಯಿಂದ ಮತ್ತು ಈ ಪ್ರದೇಶದ ಪವಿತ್ರತೆಯನ್ನು ಕಾಪಾಡುವ ಸಲುವಾಗಿ, ಮಸೀದಿಯ ಸಮೀಪ ಯಾವುದೇ ಕಾರಣಕ್ಕೂ ಮದ್ಯ ಮಾರಾಟದ ಪರವಾನಗಿಯನ್ನು (ಋಭಿಜಟಿಭಿಜ) ನೀಡಬಾರದೆಂದು ನಾವು ತಮ್ಮಲ್ಲಿ ವಿನಮ್ರವಾಗಿ ವಿನಂತಿಸಿಕೊಳ್ಳುತ್ತೇವೆ. ಜನಸಾಮಾನ್ಯರ ಭಾವನೆಗಳನ್ನು ಗೌರವಿಸಿ ತಾವು ಸೂಕ್ತ ಕ್ರಮ ಕೈಗೊಳ್ಳುತ್ತೀರೆಂದು ನಂಬಿದ್ದೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮೌಲಾನಾ ಜುಬೇರ್,ಮೌಲಾನಾ ಇಸಾಕ್, ಅಂಜುಮನ್ ಇಸ್ಲಾಂ ಕಮಿಟಿ ತಾಲೂಕ ಅಧ್ಯಕ್ಷ ಸಯ್ಯದಅಮೀನಗದ್ಯಾಳ,ಜುಬೇರ್‌ನಾಲ್ಬಂದ್,ಯುನೂಸ್ ಮುಲ್ಲಾ, ಅಸ್ಲಂ ನಾಲಬಂದ, ಬುಡ್ಡು ನಾಲಬಂದ,ರಿಯಾಜ್ ಸನದಿ, ಅಬ್ದುಲ ಅಜೀಜ್ ಮುಲ್ಲಾ, ಅಬಿದ್ ಮಾಸ್ಟರ್,, ಸಯ್ಯದ ಗಡ್ಡೇಕರ, ಸಲ್ಮಾನ್ ಮೌಲ್ವಿ, ಅಬೂಬಕರ್ ಕೊಕಟನೂರ, ಇಮ್ರಾನ್ ಪಟಾಯತ, ರಿಯಾಜ ಸನದಿ, ಬಾಬು ಖೇಮಲಾಪುರ, ಮಂಜು ಹೋಳಿಕಟ್ಟಿ, ಮುಸ್ತಾಕ್ ಮುಲ್ಲಾ, ಐ ಜಿ ಬಿರಾದರ್,ಶಾಮಶುದ್ದಿನ್ ಡಾಂಗೆ, ಅಜಹರ್ ಮುಲ್ಲಾ, ಉಮರ್ ನಾಲಬಂದ, ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಬಾಂಧವರು ಹಾಗೂ ಮುಖಂಡರು ಭಾಗವಹಿಸಿದ್ದರು.

## ನೀಟ್ ಪರೀಕ್ಷೆ: ನಿಷೇಧಾಜ್ಞೆ ಜಾರಿಗೊಳಿಸಿ ಆದೇಶ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನೀಟ್ ಪರೀಕ್ಷೆಯು ಮೇ.03ರಂದು ವಿಜಯಪುರನಗರದಒಟ್ಟು17ಪರೀಕ್ಷಾಕೇಂದ್ರಗಳಲ್ಲಿನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀ.ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿಗಳಾದ ಜಿಲ್ಲಾಧಿಕಾರಿ ಡಾ.ಆನಂದ.ಕೆ ಅವರು ಆದೇಶ ಹೊರಡಿಸಿದ್ದಾರೆ. ಪರೀಕ್ಷಾ ಕೇಂದ್ರಗಳ 200 ಮೀ ವ್ಯಾಪ್ತಿಯಲ್ಲಿನ ಪರೀಕ್ಷಾ ಕೇಂದ್ರದ ಸಮೀಪದಲ್ಲಿರುವ ಝರಾಕ್ಸ್ ಅಂಗಡಿಗಳು, ಕಂಪ್ಯೂಟ–ರ್ ಸೆಂಟರ್ ಗಳು, ಇಂಟರನೆಟ್, ಸೈಬರ್ ಕೆಫೆಗಳು ಮತ್ತು ಕೋಚಿಂಗ್ ಕೇಂದ್ರಗಳು ಬೆಳಿಗ್ಗೆ 9:30 ಗಂಟೆಯಿಂದ ಪರೀಕ್ಷೆ ಮುಕ್ತಾಯವಾಗುವವರೆಗೆ ತೆರೆಯದಂತೆ ಆದೇಶಿಸಲಾಗಿದೆ.

ಪರೀಕ್ಷೆಯಲ್ಲಿ ತೊಡಗಿರುವ ಯಾವುದೇ ಅಧಿಕಾರಿ ಹಾಗೂ ಸಿಬ್ಬಂದಿಗಳು ಮತ್ತು ಇತರರು ಮೊಬೈಲ್ ತರುವುದನ್ನು ಹಾಗೂ ಬಳಸುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

## ಕರ್ನಾಟಕ ರಾಜ್ಯ ರೈತ ಸಂಘ - ಹಸಿರು ಸೇನೆ ಸಂಘದ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಹೇಳಿಕೆ

# ಮೇ.8 ರಂದು ವಿಜಯಪುರದಲ್ಲಿ ಬೃಹತ್ ರೈತ ಜನಜಾಗೃತಿ ಸಮಾವೇಶ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದಲ್ಲಿ ಇದೇ ದಿ.8 ರಂದು ದರಬಾರ ಹೈಸ್ಕೂಲ್ ಮೈದಾನದಲ್ಲಿ ಬೃಹತ್ ರೈತ ಜನಜಾಗೃತಿ ಸಮಾವೇಶ ಸಂಘಟಿಸಲಾಗಿದ್ದು, ಆಲಮಟ್ಟಿಯ ಲಾಲ್ ಬಹೂದ್ದೂರ ಶಾಸ್ತ್ರಿ ಆಣೆಕಟ್ಟನ್ನು 519.60 ಮೀಟರ ದಿಂದ 524.256 ಮೀಟರ್ ಕ್ಕೆ ಎತ್ತರಿಸಿ ಅದಕ್ಕೆ ಬೇಕಾಗುವ ಸಂಪೂರ್ಣ ಭೂ ಪರಿಹಾರ, ಪುರ್ನವಸತಿ, ಕಲ್ಪಿಸಿ 5 ಜಿಲ್ಲೆಗಳಿಗೆ ಸಮಗ್ರ ನೀರಾವರಿ ಮಾಡುವುದು ಹಾಗೂ ಮುಳವಾಡ ಸೇರಿದಂತೆ ವಿವಿಧ ಏತ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದು ಸೇರಿದಂತೆ ಅನೇಕ ಹಕ್ಕೊತ್ತಾಯಗಳನ್ನು ಮಂಡಿಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘ – ಹಸಿರು ಸೇನೆ ಸಂಘದ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಈ ಕು–ರಿತು ವಿವರಣೆ ನೀಡಿದ ಅವರು, ಈ ನಾಡಿನಲ್ಲಿ ರೈತರಿಗೆ ಎಲ್ಲಾ ಕ್ಷೇತ್ರದಲ್ಲಿ ಎಲ್ಲಾ ಪ್ರಕಾರದ ಅನ್ಯಾಯಗಳಾಗುತ್ತಾ ಬಂದಿವೆ, ಅದನ್ನು ತಡೆಯಬೇಕಾದರೆ ರೈತರೆಲ್ಲರೂ ಜಾತ್ಯಾತೀತವಾಗಿ, ಪಕ್ಷಾತೀತವಾಗಿ, ಧರ್ಮಾತೀತವಾಗಿ ಗುರ್ಲಾಪುರದಲ್ಲಿ ನಡೆದ ಹೋರಾಟದ ಮೂಲಕ ಒಗ್ಗಟ್ಟಿನ ಸಂದೇಶ ಸಾರಿರುವ ರೈತರೆಲ್ಲರೂ ಸಮಯ ಸಂದರ್ಭ ಬಂದಾಗಲೆಲ್ಲ ಒಂದಾಗಬೇಕು, ರೈತರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ಈ ಸಮಾವೇಶದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಗಮನಕ್ಕೆ ತಂದು ರೈತರ ಶಕ್ತಿ ಎನ್ನೆಂದು ತೋ–ರಿಸಲು ರೈತರೆಲ್ಲರೂ ಒಂದಾಗಿ ಈ ತರಹದ ಸಮಾವೇಶದ ಮೂಲಕ ಒಗ್ಗಟನ್ನು ತೋ–ರಿಸಬೇಕಾಗಿದೆ ಎಂದರು.

ಮುಗಳಖೋಡ – ಜಿಡಗಾದ ಶ್ರೀ ಶಿವಯೋಗಿ ಡಾ. ಮುರಘರಾಜೇಂದ್ರ ಮಹಾಸ್ವಾಮಿಗಳು ಪಾವನ ಸಾನಿಧ್ಯವನ್ನು ವಹಿಸಿಕೊಳ್ಳಲಿದ್ದು, ಸಾನಿಧ್ಯವನ್ನು ಶಿರಶ್ಯಾಡದ ಅಭಿನವ ಮುರಘೇಂದ್ರ ಶಿವಾಚಾರ್ಯರು ಸೇರಿದಂತೆ ವಿವಿಧ ಮಠಾಧಿಶರು ಸಾನಿಧ್ಯ ವಹಿಸಲಿದ್ದು, ಸಂಘಟನೆಯ ರಾಜ್ಯಾಧ್ಯಕ್ಷ ಚುನಪ್ಪಾ ಪೂಜೇರಿ ಅಧ್ಯಕ್ಷತೆ ವಹಿಸಲಿದ್ದು,



ರಾಜ್ಯ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ ಅವರ ನೇತೃತ್ವದಲ್ಲಿ ನಾಡಿನ ಸಾವಿರಾರು ರೈತ ಮುಖಂಡರು ಹಾಗೂ ರೈತರೊಡಗೂಡಿ ಈ ಕಾರ್ಯಕ್ರಮ ಜರುಗಲಿದೆ. ಜಿಲ್ಲೆಯ ಎಲ್ಲ ಅಧಿಕಾರಿಗಳು ಈ ಸಮಾವೇಶದಲ್ಲಿ ಭಾಗಿಯಾಗಲಿದ್ದಾರೆ ಎಂದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ವತಿಯಿಂದ ಸುಮಾರು 10–15 ಸಾವಿರ ರೈತರೆಲ್ಲರೂ ಸೇರಿಕೊಂಡು 4 ನೇ ಬೃಹತ್ ರೈತ ಜನ ಜಾಗೃತಿ ಸಮಾವೇಶವನ್ನು ನಗರದ ದರಬಾರ ಗ್ರೌಂಡನಲ್ಲಿ ಆಯೋಜನೆ ಮಾಡಿದ್ದು, ಇಲ್ಲಿ ಹಲವಾರು ಕೃಷಿ ತಜ್ಞರು, ವಿಜ್ಞಾನಿಗಳು, ರೈತ ಮುಖಂಡರು ಕೃಷಿ ಕುರಿತು ಚಿಂತನೆ, ಅಭಿಪ್ರಾಯ ಮಂಡನೆ ಮಾಡುತ್ತಿದ್ದು, ಜೊತೆಗೆ ಕೃಷಿಯಲ್ಲಿ ಹಾಗೂ ವಿವಿಧ ಕ್ಷೇತ್ರದಲ್ಲಿ ವಿನೂತನವಾಗಿ ಸಾಧನೆ ಮಾಡಿದ ಸಾಧಕರಿಗೆ ವಿಶೇಷವಾಗಿ ಸನ್ಮಾನಿಸಲಾಗುವುದು ಎಂದರು.

ಸಂಘದ ರಾಜ್ಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಹುಲ್ ಕುಬಕಡ್ಡಿ, ರಾಜ್ಯ ಉಪಾಧ್ಯಕ್ಷ ಕಲ್ಲು ಸೊನ್ನದ, ರಾಜ್ಯ ಉಪಾಧ್ಯಕ್ಷ ಶಾಂತಗೌಡ ಪಾಟೀಲ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

### ಸಮಾವೇಶದಲ್ಲಿ ಸರ್ಕಾರದ ಮುಂದೆ ಹಕ್ಕೊತ್ತಾಯ

ಆಲಮಟ್ಟಿಯ ನೀರಾವರಿ ಯೋಜನೆಗೆ ಮುಳಗಡೆಗೆ ಗುರುತಿಸಿರುವ ಜಮೀನಿಗಿಂತ ಹೆಚ್ಚು ಭೂಮಿಯನ್ನು ಕಳೆದುಕೊಂಡ ರೈತರಿಗೆ ಇಲ್ಲಿಯವರೆಗೆ ಪರಿಹಾರ ನೀಡಿಲ್ಲ, ಕೂಡಲೇ ಮಂಜೂರ ಮಾಡುವುದು, ಜಿಲ್ಲೆಯಲ್ಲಿ ಅತೀಹೆಚ್ಚು ಬೆಳೆಯುವ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳಿಗೆ ಬೆಂಬಲ ಬೆಲೆಯೊಂದಿಗೆ ಖರೀಧಿ, ಮೌಲ್ಯವರ್ಧನೆ ಹಾಗೂ ಯೋಗ್ಯ ಮಾರುಕಟ್ಟೆ ಕಲ್ಪಿಸಬೇಕು, ಅದಕ್ಕೆ ಅವಶ್ಯಕ ಯೋಜನೆ ರೂಪಿಸುವುದು, ವಿದ್ಯುತ್ ಅಕ್ರಂ ಸಕ್ರಂ ಯೋಜನೆ ಮುಂದುವರೆಸಬೇಕು, ವಿದ್ಯುತ್ ಇಲಾಖೆಯನ್ನು ಖಾಸಗಿ ಮಾಡುತ್ತಿರುವುದನ್ನ ಕೈಬಿಡಬೇಕು, ರೈತರಿಗೆ ಉಚಿತವಾಗಿ (ಕಡಿಮೆ ಬೆಲೆ) ಟಿ.ಸಿ ದೊರಕಿಸುವುದು, ರೈತರಿಗೆ ಹಗಲು 12 ಘಂಟೆ ತ್ರೀಫೇಸ್ ಹಾಗೂ ರಾತ್ರಿ ಸಿಂಗಲ್ ಫೇಸ್ ಉಚಿತ ವಿದ್ಯುತ್ ನೀಡಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಸರ್ಕಾರದ ಮುಂದೆ ಇರಿಸಿ ಸಮಾವೇಶದಲ್ಲಿ ಹಕ್ಕೊತ್ತಾಯ ಮಂಡಿಸಲಾಗುವುದು ಎಂದು ಸಗರ ತಿಳಿಸಿದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR